ಚೈತ್ರರಥ

ಸ್ಮರಣ ಸಂಚಿಕೆ 1984

ಬೆಂಗಳೂರು ನಿರ್ಮಾಪಕ
ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿ (ರಿ).
ಬೆಂಗಳೂರು

Karuntlan

ಅಂದು

ಇಂದು



ಭೈರವ

ಸ್ಮರಣ ಸಂಚಿಕೆ

15 ಏಪ್ರಿಲ್ 1984

**ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ
ಪ್ರಚಾರ ಸಮಿತಿ**
ನಂ. 61, ಕಬ್ಬನ್ ಪೇಟೆ ರಸ್ತೆ,
27ನೇ ಅಡ್ಡ ರಸ್ತೆ ಸಮೀಪ,
ಬೆಂಗಳೂರು-560 002

ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಜಾಹಿರಾತು ಪ್ರಚಾರ ಸಮಿತಿ

ಮಹಾಪೋಷಕರು :

ಆರ್. ಚೈತನ್ಯಕುಮಾರ್

ಅಧ್ಯಕ್ಷರು :

ಡಿ. ರಘುಪತಿ
(ಮಾಲೀಕರು ಪ್ರೈಮ್ ಪ್ರಚಾರ)

ಉಪಾಧ್ಯಕ್ಷರು :

ಆರ್. ರಾಜಣ್ಣ
ವಿ. ಸದಾಶಿವಮೂರ್ತಿ
ಎಸ್. ಕೃಷ್ಣರಾಜು
ಮಿಶ್ರ

ಕಾರ್ಯದರ್ಶಿಗಳು :

ಬಿ. ಜಯರಾಮ್
ಚನ್ನಪ್ಪ
ಕೆ. ಚಂದ್ರಶೇಖರ್

ಉಪಕಾರ್ಯದರ್ಶಿಗಳು :

ಅಪ್ಪಯ್ಯಣ್ಣ
ನಾರಾಯಣ
ನರಸಿಂಹಯ್ಯ
ಜಿ. ಎಸ್. ಉದಯಶಂಕರ್

ಖಜಾಂಚಿ :

ಜಿ. ಗಂಗಸ್ವಾಮಯ್ಯ, ಬಿ. ಇ. (ವಿಸ್ಮೃತ್)

ಲೇಖಕರು :

ಬಿ. ವಿ. ಲಕ್ಷ್ಮಣ್
ಎಸ್. ಎ. ಮಂಜುಳ

ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿ

ಮಹಾ ಪೋಷಕರು :

ಡಾ॥ ಜೀವರಾಜ ಆಳ್ವ
ಕನ್ನಡ ಸಾಂಸ್ಕೃತಿಕ ಯುವಜನ ಇಲಾಖೆ
ರಾಜ್ಯಸಚಿವರು

ಅಧ್ಯಕ್ಷರು :

ವೆಂಕಟಪ್ಪ
ಸಿವಿಲ್ ಕಂಟ್ರಾಕ್ಟರ್

ಉಪಾಧ್ಯಕ್ಷರು :

ಎಂ. ಡಿ. ಗಂಗರಂಗಯ್ಯ
ವಿ. ಪಿ ಥೇರ್ಮನ್

ಡಿ. ರಘುಪತಿ
ಮಾಲೀಕರು ಪ್ರೈಮ್ ಪ್ರಚಾರ

ಕಾರ್ಯದರ್ಶಿಗಳು :

ಎಂ. ಶ್ರೀನಿವಾಸಮೂರ್ತಿ
ಜಿ. ವಿ. ವೆಂಕಟೇಶ್

ಸಹಕಾರ್ಯದರ್ಶಿಗಳು

ಕೆ. ರಾಮಣ್ಣ
ಎ. ಗುರುಲಿಂಗಯ್ಯ

ಖಜಾಂಚಿ :

ಜಿ. ಗಂಗಸ್ವಾಮಯ್ಯ
ಇಂಜಿನಿಯರ್

ಲೇಖಕರು :

ಬಿ. ವಿ. ಲಕ್ಷ್ಮಣ್
ಎಸ್. ಎ. ಮಂಜುಳ
ಪುಟ್ಟಮ್ಮ

ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ
ಪ್ರಚಾರ ಸಮಿತಿ ಬೆಂಗಳೂರು-2

ನಮ್ಮ ಸಂಸ್ಥೆಯ ಧ್ಯೇಯೋದ್ದೇಶಗಳಿಗೂ ಮತ್ತು ಕೆಂಪೇಗೌಡರ ಮಹತ್ಕಾರ್ಯಗಳ ಸ್ಮರಣೆಗೂ, ಮುಂದಿನ ಕಾರ್ಯಕಲಾಪಗಳಿಗೂ ಪ್ರೋತ್ಸಾಹ ಕೊಟ್ಟು ನಮ್ಮನ್ನು ಹಾರೈಸುತ್ತಿರುವ ನಮ್ಮ ಪೂಜ್ಯ ಕುಲಗುರುಗಳೂ, ಜನತೆಯ ಹಿತೈಷಿಗಳೂ ಆದ

ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು
ಆದಿಚುಂಚನಗಿರಿ ಮಠಾಧೀಶರು

ಸ್ವಾಮಿಗಳ ಆಶೀರ್ವಾದವನ್ನು ಸದಾ ಅಪೇಕ್ಷಿಸುವ,

ಇಂತು,

ವೆಂಕಟಪ್ಪ (ಅಧ್ಯಕ್ಷರು)
ಕೆಂಪೇಗೌಡ ಪ್ರಚಾರ ಸಮಿತಿ.

ಮೊದಲ ಮಾತು

ಸುಂದರ ಬೆಂಗಳೂರು ಕಟ್ಟಿದ ಆಗಿನ ಪ್ರಭು ಕೆಂಪೇಗೌಡರ ನೆನಪು ಯಾರಿಗಿಲ್ಲ? ಯಾರಿಗುಂಟು? ದಿನಕಳೆದಂತೆ ಬೆಂಗಳೂರಿನ ಉದ್ದಗಲಗಳು ಬೆಳೆಯುತ್ತಲೇ ಇದೆ. ರಾಜ್ಯದ ರಾಜಧಾನಿಯಾಗಿ ಎಲ್ಲರನ್ನೂ ಆಕರ್ಷಿಸುತ್ತ ಕೆಂಪೇಗೌಡರು ಹಾಕಿದ ಗೆರೆದಾಟಿದೆ. ಆಧುನಿಕ ಕಟ್ಟಡಗಳು ತಲೆಎತ್ತಿ ಉದ್ಯಾನ ನಗರವನ್ನು ಕಟ್ಟಡಗಳ ಕಾಡನ್ನಾಗಿ ಮಾಡಿದೆ. ನಾಗರೀಕತೆ ಬೆಳೆದಂತೆ ಊರು ಬೆಳೆಯುವುದು ಸಹಜ. ಆದರೆ ಊರಿನ ಅಂದ ಕೆಡಿಸಿ ಮುನ್ನಡೆಯುವುದು ಉಚಿತವಲ್ಲ.

ನಾಡಿಗಾಗಿ, ನಗರಕ್ಕಾಗಿ ದುಡಿದ ಕೆಂಪೇಗೌಡರನ್ನು ನಾವೆಲ್ಲಾ ಸ್ಮರಿಸುವುದು ಅತ್ಯಗತ್ಯ. ಕೆಂಪೇಗೌಡರನ್ನು ಮರೆಯುವುದು ಚರಿತ್ರೆಯ ಘಟಗಳನ್ನು ಹರಿದಂತೆ. ಕೆಂಪೇಗೌಡರ ದೈವಭಕ್ತಿ, ರಾಷ್ಟ್ರ ಪ್ರೇಮ ನಮ್ಮನ್ನೆಲ್ಲಾ ಇಂದಿಗೂ ವಿಸ್ಮಯ ಮಾಡುವಂತಹುದು.

ಕೆಂಪೇಗೌಡರು ಕಟ್ಟಿದ ಬೆಂಗಳೂರನ್ನು ಸರಿಯಾಗಿ ಉಳಿಸಿಕೊಂಡು ಹೋಗುವುದು ನಮ್ಮ ಜವಾಬ್ದಾರಿ. ಅವರ ಬಗ್ಗೆ ಅವರ ವಂಶಜರ ಬಗ್ಗೆ ಗೌರವ ತೋರುವುದು ನಮ್ಮ ಕರ್ತವ್ಯ. ಇದಕ್ಕೆ ತಕ್ಕ ಪ್ರಚಾರದ ಅಗತ್ಯವಿದೆ. ಈ ದಿಸೆಯಲ್ಲಿ ಆರಂಭವಾದ 'ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿ' ಅನೇಕ ಬಗೆಯ ಪ್ರಚಾರ ಹಾಗೂ ಜನಸೇವಾ ಕಾರ್ಯಗಳನ್ನು ಹೆಮ್ಮಿಕೊಂಡಿದೆ. ಇಂದು (15-4.84) ನಡೆಯುತ್ತಿರುವ ಕಾರ್ಯಕ್ರಮಗಳೆಲ್ಲ ನಮ್ಮ ಮೊದಲ ಹೆಜ್ಜೆ.

ನಮ್ಮ ಧ್ಯೇಯೋದ್ದೇಶಗಳಿಗೆ ಸಹಕರಿಸಿದವರನೇಕ. ಬೆನ್ನುತಟ್ಟಿ ಮುನ್ನಡೆಸಿದವರಿಗೆಲ್ಲಾ ಸಮಿತಿಯ ಪರವಾಗಿ ಅನಂತ ವಂದನೆಗಳು.

ವೆಂಕಟಪ್ಪ
ಅಧ್ಯಕ್ಷರು
ಬೆಂಗಳೂರು ನಿರ್ಮಾಪಕ ಮಾಗಡಿ
ಕೆಂಪೇಗೌಡರ ಪ್ರಚಾರ ಸಮಿತಿ, ಬೆಂಗಳೂರು.

ಸ್ಮರಣ ಸಂಚಿಕೆಯ ವಿವರಣೆ

ಮುಖಪುಟ	ರಣಬೈರೇಗೌಡರ ಚಿತ್ರ
ಹೊರಪುಟ	ಬೆಂಗಳೂರು ನಿರ್ಮಾಪಕ ಕೆಂಪೇಗೌಡರ ಚಿತ್ರ
ಸಂದೇಶಗಳು	
ಪರಿಚಯ :	
ಎಸ್. ಕೆ. ಕರೀಂಖಾನ್	ಎಂ. ಡಿ. ಗಂಗರಂಗಯ್ಯ
ಬಿ. ವಿ. ಲಕ್ಷ್ಮಣ್	,,
ತಪೋದ್ಗಿರಿ	ಎಸ್. ಎ. ಮಂಜುಳ
ಬೆಂಗಳೂರು ಅಂದು ಇಂದು	ಜಿ. ಗಂಗಸ್ವಾಮಯ್ಯ, ಇಂಜನಿಯರ್ B.E.(Elect)M.I.E.D.L.M.
ದೊಡ್ಡಾಂಬೆ	ವಿ. ಚನ್ನಮ್ಮ
ಕೋರುಮಂಗಳ	ಕೆ. ಸಿ. ಚೌಡಪ್ಪರೆಡ್ಡಿ
ನಮ್ಮ ಸೀನರಿ ಲಕ್ಷ್ಮಣ್	ಬಿ. ಎಂ. ಬೇಸರ್ ಸಿಂಗ್
ಕವನ	ತಿಮ್ಮೇಶ್‌ಪ್ರಭು
ರೈತ-ಒಕ್ಕಲಿಗ	ಕವಿತಾಕೃಷ್ಣ
ಕಕುದ್ಗಿರಿ ಶಿವಗಂಗೆ	ಬಿ. ಎಲ್. ಗೌರಮ್ಮ
ನವೀನ ಬುಡಬುಡಿಕೆ	ಹೆಚ್ ಗಂಗಪ್ಪ
ಬೆಂಗಳೂರಿನ ಪರಿಚಯ	ಕೆ. ಜಯರಾಂ
ನಂದಿ ಕ್ಷೇತ್ರ	ಹೆಚ್. ವಿ. ರಾಜ್‌ಕುಮಾರ್

ನಡೆದು ಬಂದ ದಾರಿ...........

ಅಂದಿನ 'ಬೆಂಗಳೂರು', ಇಂದು ಕರ್ನಾಟಕ ರಾಜಧಾನಿ ಬೆಂಗಳೂರು ಆಗುವುದೊರಳಗೆ ಅನೇಕ ಬದಲಾವಣೆಗಳನ್ನೂ ಹೊಂದಿ ವಿಶ್ವವಿಖ್ಯಾತವಾಗಿದೆ. ನಿಜ. ಆದರೆ ಬೆಂಗಳೂರು ನಗರ ಕಟ್ಟಿದ ಕೆಂಪೇಗೌಡರನ್ನೇ ಮರೆಯುವ ಕಾಲ ಬಂದಿರುವುದು ವಿಷಾದದ ಸಂಗತಿ. ಕೆಂಪೇಗೌಡರ ಬಗ್ಗೆ ತಕ್ಕ ಬರಹಗಳಿಲ್ಲದೇ, ಪ್ರಚಾರವಿಲ್ಲದೇ ಇರುವುದು ತಮಗೆ ತಿಳಿದ ವಿಷಯ. ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡ ಪ್ರಚಾರ ಸಮಿತಿಯು ಬರವಣಿಗೆ ಮತ್ತು ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ತಕ್ಕ ಪ್ರಚಾರ ಹಾಗೂ ಜನಸೇವೆ ಮಾಡಲು ಆರಂಭಗೊಂಡಿದೆ.

ಕಳೆದ 30 ವರ್ಷಗಳಿಂದಲೂ ಕೆಂಪೇಗೌಡ ಮತ್ತು ಅದರ ವಂಶಜರ ಬಗ್ಗೆ ಊರೂರು ಅಲೆದು ದಾಖಲೆಗಳನ್ನು ಪತ್ತೆಹಚ್ಚಿ ಸಂಶೋಧನೆ ನಡೆಸಿ 'ಉತ್ತರೀದುರ್ಗ' ಪುಸ್ತಕ ಬರೆದಿದ್ದಾರೆ. ಊರೂರುಗಳಿಗೆ ಭೇಟಿ ನೀಡಲು ಅವರಿವರಿಂದ ಹಣ ಪಡೆದು ದಾಖಲೆಗಳನ್ನು ಸಂಗ್ರಹಿಸಿದ್ದಾರೆ. ಪರಿಚಯವಾದ ಇಂಜಿನಿಯರ್. ಜಿ. ಗಂಗಸ್ವಾಮಯ್ಯನವರು ಧನಸಹಾಯವಲ್ಲದೇ, ಛಾಯಾಗ್ರಹಣಕ್ಕೂ, ಬರವಣಿಗೆಗೆ ಶ್ರೀಮತಿ ಎಸ್. ಎ. ಮಂಜುಳಾ ಗಂಗಸ್ವಾಮಿಯವರು ಸಹಾಯಮಾಡಿದ್ದಾರೆ. ನಂತರ ಪರಿಚಯವಾದ ಸಮಿತಿಯ ಅಧ್ಯಕ್ಷ ಶ್ರೀ ವೆಂಕಟಪ್ಪನವರು ಸಹ ಧನಸಹಾಯ ನೀಡಿ ಪ್ರೋತ್ಸಾಹಿಸಿದರು. ಉತ್ತರೀದುರ್ಗ' ಪುಸ್ತಕ ಹೊರತರಬೇಕು ಎನ್ನುವ ಆಲೋಚನೆಯೊಂದಿಗೆ ಹಲವಾರು ಯೋಜನೆಗಳೂ ಸಿದ್ಧವಾದವು, ಆ ವೇಳೆಗೆ ನಾವು ಮತ್ತು ಎಂಡಿ. ಗಂಗರಂಗಯ್ಯ, ಡಿ. ರಘುಪತಿ ಮತ್ತಿತರರು ಸಮಿತಿಯೊಂದಿಗೆ ಬೆರೆತೆರು. ಸಮಿತಿಯ ಧ್ಯೇಯೋದ್ದೇಶಗಳೆಲ್ಲಾ ರೂಪಿತವಾದವು. ಸರಿ, ಖ್ಯಾತ ಸಾಹಿತಿ ಎಸ್. ಕೆ. ಕರೀಂಖಾನ್‌ರವರಿಂದ "ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡ" ನಾಟಕ ಬರೆಸಿಕೊಂಡು ಪ್ರದರ್ಶನದ ಸಿದ್ಧತೆಯೂ ನಡೆಯಿತು.

ಈ ವೇಳೆಗಾಗಲೇ ನಮ್ಮೊಂಧಿಗೆ ಸಹಕಾರ ನೀಡಲು ಮುಂದೆ ಬಂದವರು ಅನೇಕರು. ಚೈತನ್ಯಕುಮಾರ್, ತಿಸ್. ಕೃಷ್ಣರಾಜು, ಗುರುಲಿಂಗಯ್ಯ, ಕೆ. ಜಯರಾಂ, ರಮೇಶ್, ವಿ. ಸದಾಶಿವಮೂರ್ತಿ, ಮರಿಸ್ವಾಮಪ್ಪ, ಆರ್. ರಾಜಣ್ಣ ಮಾದಾವರದ ತಿಮ್ಮರಸಯ್ಯ, ವಿ. ಭೂಪತಿ, ಎನ್. ರಾಜಣ್ಣ, ಉದಯಶಂಕರ್ ಮುಂತಾದವರು.

ನಾಟಕಕ್ಕೆ ಸಂಗೀತ ನೀಡಿದ್ದಾರೆ ಸಿನಿಮಾ ಸಂಗೀತ ನಿರ್ದೇಶಕ ದಾಮೋದರ್ ನಾಟಕ ನಿರ್ದೇಶನ ಎಂ. ಆರ್. ಸುಬ್ಬರಾಂರವರದು. ವಾದ್ಯತಂಡ ಹಾಗೂ

ಹಾಡುಗಾರರು ಮತ್ತು ನಾಟಕದ ಕಲಾವಿದ, ಕಲಾವಿದೆಯರು ತುಂಬಾ ಸಹಕರಿಸಿದ್ದಾರೆ.

ಇಂದು (15-4-84) ಕಾರ್ಯಕ್ರಮ ನಡೆಯುವ ವೇಳೆಗೆ ಸಮಿತಿಯೊಂದಿಗೆ ಕಲೆತು ಅನೇಕ ಕೆಲಸಗಳನ್ನು ಮಾಡಿಕೊಟ್ಟು ಮುನ್ನಡೆಸಿದವರು ಅಸಂಖ್ಯ ಅಭಿಮಾನಿಗಳು. ಜಾಹಿರಾತು ಕೊಟ್ಟು ಸಹಕರಿಸಿದವರನೇಕ. ಸಹಾಯ ನೀಡಿದವರ ಪಟ್ಟಿಗೆ ಕೊನೆಯಿಲ್ಲ.

ನಮ್ಮ ಸಂಘದ ಮಹಾಪೋಷಕರಾದ ಡಾ॥ ಜೀವರಾಜ ಆಳ್ವರವರು ಪ್ರತೀ ಹೆಜ್ಜೆಯಲ್ಲೂ ಮಾರ್ಗದರ್ಶನ ಮಾಡಿದ್ದಾರೆ. ಅವರಿಗೆ ವಂದನೆಗಳು.

ದೊರೆತ ಕಡಿಮೆ ಕಾಲಾವಕಾಶದಲ್ಲೇ ಈ ಸ್ಮರಣ ಸಂಚಿಕೆಯನ್ನು ಮುದ್ರಿಸಿ ಕೊಟ್ಟ ಜಯನಗರ ನೀಲಕಂಠೇಶ್ವರ ಪ್ರಿಂಟರ್ಸ್‌ರವರಿಗೆ ನಮ್ಮ ನಮನ.

ನಮ್ಮೊಂದಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಾಯಮಾಡಿದವರಿಗೆಲ್ಲಾ ಅನಂತ ವಂದನೆಗಳು.

ಎಂ. ಶ್ರೀನಿವಾಸಮೂರ್ತಿ
ಜಿ. ವಿ. ವೆಂಕಟೇಶ್
ಕಾರ್ಯದರ್ಶಿಗಳು

ಕೆ. ರಾಮಣ್ಣ
ಉಪಕಾರ್ಯದರ್ಶಿ



ಶ್ರೀ ಸಿದ್ಧಲಿಂಗಶಿವಾಚಾರ್ಯಸ್ವಾಮಿಗಳು,
ಅಧ್ಯಕ್ಷರು.
ಶ್ರೀ ಶಿವರುದ್ರಶಿವಾಚಾರ್ಯಸ್ವಾಮಿಗಳು,
ಉಪಾಧ್ಯಕ್ಷರು.

ಸಂಖ್ಯೆ ಶ್ರೀ. ವೆ. ಸ್ವಾ. 186/8384

ಅಂಕನಹಳ್ಳಿಮಠ.
ಅಂಕನಹಳ್ಳಿಮಠ ಅಂಚೆ.
ಕುಣಿಗಲ್ ತಾಲ್ಲೂಕ್, ತುಮಕೂರು ಜಿಲ್ಲೆ

ಕನ್ನಡ ನಾಡಿನ ಇತಿಹಾಸದಲ್ಲೇ ಮಹತ್ವ ಪೂರ್ಣವಾದ ಸ್ಥಾನವನ್ನು ಹೊಂದಿದ ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಜೀವನ ಚರಿತ್ರೆಯನ್ನು ಪರಿಶೋದಿಸಿ ಸಂಗ್ರಹಿಸಿ, ಪ್ರಕಟಿಸುತ್ತಿರುವ ನಿಮ್ಮ ಕಾರ್ಯವು ಅಭಿನಂದನಾರ್ಹವಾದದ್ದಾಗಿದೆ.

ಯಲಹಂಕ ಪ್ರಭುಗಳಾಗಿದ್ದ ಕೆಂಪೇಗೌಡರು ಕೈಗೊಂಡ ಕಾರ್ಯಗಳು, ಮತ್ತು ಅವರ ದೈವಭಕ್ತಿ ಇಂದಿನ ನವಪೀಳಿಗೆಗಳಿಗೆ ಮಾರ್ಗದರ್ಶಕವಾಗಿದೆ. ಅಂದಿನ ದಿನಗಳಲ್ಲೆ ಕನ್ನಡ ನೆಲವನ್ನು ಬಂಗಾರವಾಗಿಸಲು ಬಯಸಿ ಕೆಂಪೇಗೌಡರು ಕಟ್ಟಿಸಿದ ನೂರಾರು ಕೆರೆಗಳು, ಶತೃಗಳಿಗೆ ದುರ್ಗಮವಾಗಿ ನಿರ್ಮಿಸಿದ ಕೋಟೆಗಳು, ನಗರ ನಿರ್ಮಾಣದಲ್ಲಿ ತೋರಿಸಿದ ತಂತ್ರಜ್ಞಾನ, ರಾಜಕೀಯದಲ್ಲಿ ತೋರಿದ ಚಾಣಾಕ್ಷತೆ, ದೈವಭಕ್ತಿ ಇವೆಲ್ಲವು ಕೆಂಪೇಗೌಡರ ವಿವಿಧ ಮುಖಗಳ ಪರಿಚಯವನ್ನು ನೀಡುತ್ತವೆ.

ಕೆಂಪೇಗೌಡರು ಮತ್ತವರ ವಂಶಜರು ಮಾಗಡಿ ಹಾಗೂ ಕುಣಿಗಲ್‌ನ್ನು ತಮ್ಮ ಕಾರ್ಯಕ್ಷೇತ್ರವಾಗಿಸಿಕೊಂಡು ಹುತ್ರಿದುರ್ಗ, ಸಾವನದುರ್ಗ, ಶಿವಗಂಗೆಯಲ್ಲಿಯೇ 63 ಮಠಗಳು, 63 ದೇವಸ್ಥಾನಗಳನ್ನು 63 ಕೆರೆಗಳನ್ನು ನಿರ್ಮಿಸಿ ದೇವಸ್ಥಾನಗಳಿಗೆ ಭೂಮಿಯನ್ನು ಧತ್ತಿಯಾಗಿ ನೀಡಿ ಇಂದಿಗೂ ಪೂಜಾದಿಗಳು ನಡೆಯುವಂತೆ ಮಾಡಿರುವ ಇಂತಹ ದೈವಭಕ್ತ, ನಿಷ್ಟಾವಂತ. ದಕ್ಷ ದೊರೆಯ ಪರಿಚಯವನ್ನು ಇಂದಿನ ನವಪೀಳಿಗೆಗಳಿಗೂ ರಾಜಕಾರಣಿಗಳಿಗೂ ಮಾಡಿಕೊಡುತ್ತಿರುವುದು ಸಮಯೋಚಿತವಾಗಿದೆ.

ಇಂತಹ ಉತ್ತಮಕಾರ್ಯವನ್ನು ಕೈಗೊಂಡಿರುವ ಪ್ರಚಾರ ಸಮಿತಿಗೂ ಮತ್ತು ಕೃತಿಕರ್ತರಾದ ಶ್ರೀ ಬಿ.ವಿ. ಲಕ್ಷಣ್ ಮತ್ತು ಎಸ್, ಎ. ಮಂಜುಳಾಗಂಗಾಸ್ವಾಮಿಯವರು ಅಭಿನಂದನಾರ್ಹರಾಗಿದ್ದಾರೆ. ಈ ಕಾರ್ಯವನ್ನು ಕೈಗೊಂಡಿರುವ ನಿಮ್ಮೆಲ್ಲರಿಗೂ ಭಗವಂತನು ಆಯುರಾರೋಗ್ಯ ಸಕಲ ಸಂಪದಗಳನ್ನು ದಯಪಾಲಿಸಿ ಇನ್ನೂ ಇಂತಹ ಕೃತಿಗಳನ್ನು ರಚಿಸಿ ಪ್ರಕಟಿಸುವಂತಹ ಶಕ್ತಿಯನ್ನು ನೀಡಲೆಂದು ಆಶಿಸುತ್ತೇವೆ.

ಇತ್ಯಾಶಿಷಃ

ತಾ॥ 2-4-84

(ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು)

ಶ್ರೀ ಶ್ರೀ ಶ್ರೀ ಕುಮಾರಸ್ವಾ
ಶ್ರೀ ಗುರು ತಿರುಚೀ ಸ್ವಾ
ಮಠದ ಪೀಠಾಧಿ
ಬೆಂಗಳೂರು - ಮೈಸೂರ
18 ಕಿಲೋಮೀಟರ್, ಬೆಂಗ

ನಮ್ಮ ಭಾರತದೇಶದಲ್ಲಿ ಅನೇಕ ಸುಪ್ರಸಿದ್ಧ ನ
ಅದರಲ್ಲಿ ಬೆಂಗಳೂರು ನಗರವೂ ಒಂದಾಗಿದೆ. ಇದು
ದೇಶದಲ್ಲೇ ಅಲ್ಲ, ಪ್ರಪಂಚದಲ್ಲೇ ಅತಿ ಸುಂದ
ಉತ್ತಮ ವಾಯುಗುಣವನ್ನು ಹೊಂದಿರುವ ಮತ್ತು
ರೀತಿಯ ಸೌಕರ್ಯಗಳನ್ನು ಹೊಂದಿರುವ ಕಲ್ಯಾಣನಗ
ಇದು ನಮ್ಮ ಕರ್ಣಾಟಕರಾಜ್ಯದ ರಾಜಧಾನಿ
ಇಂತಹ ನಗರದ ಸ್ಥಾಪನೆಗೆ ಕಾರಣಕರ್ತರಾದವರು
ನಾಂದಿಯಾದವರು ಶ್ರೀ ಕೆಂಪೇಗೌಡರು. ಆದ್ದರಿಂದ
ನಗರವನ್ನು ಕೆಂಪೇಗೌಡ ಕಟ್ಟಿದ ಬೆಂಗಳೂರು ನಗರ
ಪುರಿ ಎಂದು ಕರೆಯುತ್ತಾರೆ.

ಪರಮಾತ್ಮನ ಲೀಲೆಯಿಂದ ಈ ಜಗತ್ತು ಉಂಟಾಗಿದೆ ಮತ್ತು ಈ ಜಗತ್ತಿನ ವ್ಯವಹಾರವು ಕರ್ಮ ಮತ್ತು ಪ್ರಕೃತಿಗೆ ಅನುಗುಣವಾಗಿ ನಡೆಯುತ್ತಿದೆ. ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಪರಮಾತ್ಮನೇ ಕಾರಣನು. ನಮ್ಮ ಭಾರತದಲ್ಲಿ ಸಪ್ತಪುರಿಗಳು ಪ್ರಸಿದ್ಧವಾಗಿದ್ದುವು. ಹಾಗೇ ಋಷಿಗಳು, ಯೋಗಿಗಳು, ಜ್ಞಾನಿಗಳು, ಮಹಾತ್ಮರುಗಳು ಜನ್ಮತಾಳಿದ್ದರು. ಅನೇಕ ಉತ್ತಮ ರಾಜರುಗಳು ಹುಟ್ಟಿದ್ದರು. ಎಲ್ಲವೂ ಪರಮಾತ್ಮನ ಸಂಕಲ್ಪದಂತೆ ನಡೆಯುವುದು. "ತೃಣಮಪಿ ನಚಲತಿ ತೇನವಿನಾ" ಎಂದು ನಾಣ್ನುಡಿ ಇದೆ. ಪರಮಾತ್ಮನ ಸಂಕಲ್ಪವಿಲ್ಲದೆ ಒಂದು ಹುಲ್ಲುಕಡ್ಡಿಯೂ ಅಲ್ಲಾಡುವುದಿಲ್ಲ ಎಂಬುದು ಈ ವಾಕ್ಯದ ಅರ್ಥ. ಪ್ರಕೃತಿ ನಿಯಮಾನುಸಾರ ಲೋಕವ್ಯವಹಾರ ನಡೆಯುತ್ತಿರುವುದು, ಅದರ ಪ್ರಕಾರ ಅನೇಕ ರಾಜರುಗಳು ಹುಟ್ಟಿ ಸಾಮ್ರಾಜ್ಯವನ್ನು ಆಳಿ, ಪ್ರಜೆಗಳ ಹಿತಾಸಕ್ತಿಯನ್ನು ನೋಡಿಕೊಂಡಿದ್ದಾರೆ. ಅಂತಹ ಸತ್ಯಶೀಲರು, ಧೀರರು, ದೈವಭಕ್ತರೂ ಆದ ರಾಜರುಗಳಲ್ಲಿ ಬೆಂಗಳೂರು ನಗರದ ಕೆಂಪೇಗೌಡರೂ ಒಬ್ಬರು. ಇಂತಹ ಸತ್ಯಶೀಲರಾದ ಮತ್ತು ಜನಗಳಿಗಾಗಿ ದುಡಿದ ಶ್ರೀ ಕೆಂಪೇಗೌಡರ ಕಥೆಯನ್ನುನಮ್ಮ ಬಿ.ವಿ. ಲಕ್ಷ್ಮಣ್‌ರವರು ಸಂಶೋಧನೆ ಮಾಡಿ ಶ್ರೀ ಜಿ. ಗಂಗಸ್ವಾಮಯ್ಯ ಇಂಜಿನಿಯರ್ ಅವರ ಧರ್ಮಪತ್ನಿಯಾದ ಮಂಜುಳ ಅವರಿಂದ ಲೇಖನವನ್ನು ಬರೆಸಿ ಕಥಾಸಂಗ್ರಹವಾಗಿ ಮಾಡಿಸುತ್ತಿದ್ದಾರೆ. ಈ ಲೇಖನಕಥೆ ಬಹಳ ಸರಳವಾಗಿ ಸಂಕ್ಷಿಪ್ತವಾಗಿದೆ. ಸಣ್ಣಮಕ್ಕಳಿಗೂ ಇದರ ಸಾರಾಂಶ ಮನವರಿಕೆಯಾಗುವಂತೆ ಮಾಡಿರುತ್ತಾರೆ. ಇವರು ಇನ್ನೂ ಅನೇಕ ಮಂದಿ ಇತಿಹಾಸದ ವೀರರ ಪ್ರತಾಪಶಾಲಿಗಳ, ಸತ್ಯಸಂಧರ ಮತ್ತು ಜನರಹಿತಕ್ಕಾಗಿ ದುಡಿದ ವ್ಯಕ್ತಿಗಳ ಕಥೆಯನ್ನು ಮತ್ತು ಐತಿಹಾಸಿಕ ಸ್ಥಳಗಳ ಚರಿತ್ರೆಗಳನ್ನು ಸಂಗ್ರಹವಾಗಿ ಬರೆಯುವ ಉದ್ದೇಶವನ್ನು ಹೊಂದಿರುತ್ತಾರೆ. ಅವರ ಮನೋಬೀಷ್ಟಗಳು ಯಾವ ಅಡಚಣೆ ಇಲ್ಲದೆ ಸುಲಲಿತವಾಗಿ ನೆರವೇರುವಂತೆ ಜಗನ್ಮಾತೆಯಾದ ಶ್ರೀ ರಾಜರಾಜೇಶ್ವರಿ ದೇವಿಯು ಅನುಗ್ರಹಿಸಲಿ. ಇವರು ಅಂದರೆ ಬಿ.ವಿ ಲಕ್ಷ್ಮಣ್ ಅವರು ಕಲಾವಿದರು, ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕ್ ಬೆಳ್ಳೂರು ಹೋಬಳಿ ಶ್ರೀ ಆದಿ ಚುಂಚನಗಿರಿ ಮಠದ ಪಕ್ಕದಲ್ಲಿ

ರುವ ಬ್ಯಾಲದಕೆರೆ ಗ್ರಾಮದಲ್ಲಿ ಹುಟ್ಟಿ, ಸ್ವಲ್ಪ ವಿದ್ಯಾಭ್ಯಾಸ ಮಾಡಿ ಕಲಾರಂಗಕ್ಕೆ ಇಳಿದರು. ಅನೇಕ ರೀತಿ ಪಾತ್ರಗಳನ್ನು ಅಭಿನಯಿಸಿ. ಈಗ ವೀರಪುರುಷರುಗಳ ಕಥೆಯನ್ನು ಜನಗಳಿಗೆ ಮನವರಿಕೆಮಾಡುವ ಸದುದ್ದೇಶದಿಂದ ಅನೇಕ ಇತಿಹಾಸ ಚರಿತ್ರೆಗಳನ್ನು ಸಂಶೋಧಿಸಿ ಪ್ರಕಟಿಸಲು ಪ್ರಾರಂಭಿಸಿರುತ್ತಾರೆ. ಅವರಿಗೆ ಇನ್ನೂ ಅನೇಕ ಒಳ್ಳೊಳ್ಳೆ ಕಾರ್ಯಗಳನ್ನು ಮಾಡಲು ಪರಮಾತ್ಮನು ಆಯುರಾರೋಗ್ಯಾದಿಗಳನ್ನು ಕೊಟ್ಟು ಮಂಗಳವನ್ನು ಉಂಟುಮಾಡಲೆಂದು ಪ್ರಾರ್ಥಿಸುತ್ತೇವೆ.

ಇತೋಪ್ಯತಿಶಯಗಳು.

ಶ್ರೀ ರಾಜರಾಜೇಶ್ವರಿ ಸ್ಟೂಡಿಯೋ.

ಶ್ರೀ ನೀಲಕಂಠ ಶಿವಾಚಾರ್ಯ
ಸ್ವಾಮಿಗಳು
ಶ್ರೀ ಉರಿಗದ್ದಿಗೇಶ್ವರ ಕ್ಷೇತ್ರಾಧ್ಯಕ್ಷರು
ಶ್ರೀ ಬೆಟ್ಟಹಳ್ಳಿ ಮಠ

ಶ್ರೀ ಬೆಟ್ಟಹಳ್ಳಿ ಪೋಸ್ಟ್,
ಕುಣಿಗಲ್ ತಾಲ್ಲೂಕು,,
ತುಮಕೂರು ಜಿಲ್ಲಾ

ಯಲಹಂಕ ನಾಡಿನ ಪ್ರಭುಗಳು ಮತ್ತು ಅವರ ವಂಶಜರು ಕೈಗೊಂಡ ಸಮಾಜೋದ್ಧಾರ ಕಾರ್ಯಗಳು, ಪ್ರದರ್ಶಿಸಿದ ಸಾಹಸ ಪರಾಕ್ರಮಗಳನ್ನೊಳಗೊಂಡ ಅನೇಕ ವಿಚಾರಗಳ ಐತಿಹ್ಯಗಳನ್ನೊಳಗೊಂಡ, ಹುತ್ತರಿದುರ್ಗದ ಪುಸ್ತಕ ಮತ್ತು ಸ್ಮರಣಸಂಚಿಕೆಗಳನ್ನು, ಸಮಿತಿಯು ಪ್ರಕಟಪಡಿಸುತ್ತಿರುವ ವಿಷಯವು ಸ್ತುತ್ಯಾರ್ಹವಾಗಿರುತ್ತದೆ.

ಮಾಗಡಿ ಕೆಂಪೇಗೌಡ ಮತ್ತು ಆತನ ವಂಶಜರು ಹುತ್ತರೀದುರ್ಗವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು, ಅಧಿಕಾರ ನಡೆಸುತ್ತಿದ್ದ ಕಾಲದಲ್ಲಿ, ಕುಣಿಗಲ್ ತಾಲ್ಲೂಕ್ ಹುತ್ತರಿದುರ್ಗದ ಶ್ರೀ ಬೆಟ್ಟಹಳ್ಳಿಮಠದ ಗುರು ಪರಂಪರೆಗೆ ನಡೆದುಕೊಂಡು, ಶ್ರೀ ಮಠಕ್ಕೆ ದಾನದತ್ತಿಗಳನ್ನು ಇತ್ತಿರುವುದು, ಶ್ರೀ ಮಠದಲ್ಲಿ ಲಭ್ಯವಿರುವ ದಾನ ಶಾಸನಗಳಿಂದ ತಿಳಿದು ಬರುತ್ತದೆ.

ಪುಸ್ತಕದ ಲೇಖಕರಾದ ಶ್ರೀ ಬಿ. ವಿ. ಲಕ್ಷ್ಮಣ್ ಮತ್ತು ಶ್ರೀಮತಿ ಮಂಜುಳಾ ಗಂಗಸ್ವಾಮಿಯವರು, ವಿಷಯ ಸಂಗ್ರಹಣೆಗೋಸ್ಕರ, ಯಲಹಂಕನಾಡಿನ ಪ್ರಭುಗಳು ಆಳಿ, ಬಾಳಿದ, ಅನೇಕ ಸ್ಥಳಗಳನ್ನು ಸಂದರ್ಶಿಸಿ, ಲಭ್ಯ ವಿರುವ ಐತಿಹ್ಯಗಳನ್ನು ಪತ್ತೆಹಚ್ಚಿ, ತುಂಬಾ ಶ್ರಮಪಟ್ಟು, ಉತ್ತಮ ವಿಷಯಗಳನ್ನು ಸಂಗ್ರಹಿಸಿ, ಪುಸ್ತಕದ ಮೌಲ್ಯವನ್ನು ಹೆಚ್ಚಿಸಿರುತ್ತಾರೆ.

ಪ್ರಕಟಣೆಗಳು ಸರ್ವಾಂಗ ಸುಂದರವಾಗಿ ಹೊರಬಂದು ಸಮಾರಂಭವು ಯಶಸ್ವಿಯಾಗಿ ನೆರವೇರಿ, ದಯಾಮಯು ನಾದ ಪರಮಾತ್ಮನು ಸರ್ವರಿಗೂ ಸನ್ಮಂಗಳಗಳನ್ನುಂಟುಮಾಡಲೆಂದು ಹಾರೈಸುತ್ತೇವೆ.

ಇತ್ಯಾಶಿಷಃ

ತಾ॥ 4-4-84

(ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು)

ಮುಖ್ಯಮಂತ್ರಿ

ಪಿ.ಎಸ್.ಸಿ.ಎಂ. 130/84
ವಿಧಾನ ಸೌಧ



ಜನಪ್ರಿಯವಾಗಲಿ

ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿ ವತಿಯಿಂದ ಯಲಹಂಕ ನಾಡಿನ ಪ್ರಭುಗಳ ವಂಶವೃಕ್ಷ ಕುರಿತು ಪ್ರಕಟವಾದ ಗ್ರಂಥವು 15-4-1984 ರಂದು ಬಿಡುಗಡೆಯಾಗಲಿರುವುದನ್ನು ತಿಳಿದು ನನಗೆ ಸಂತೋಷ ವಾಗಿದೆ.

ಉತ್ತರಿ ದುರ್ಗಗ್ರಂಥವು ಜನಪ್ರಿಯವಾಗಲಿಯೆಂದು ಹಾರೈಸುತ್ತೇನೆ.

ಸಹಿ

(ರಾಮಕೃಷ್ಣ ಹೆಗಡೆ)

ತಾ॥ 6-4-84

ಎಂ. ರಘುಪತಿ
ವಾರ್ತಾ ಮತ್ತು ಪ್ರಚಾರ ಹಾಗೂ
ಪ್ರವಾಸೋದ್ಯಮ ಸಚಿವರು

ವಿಧಾನ ಸ



ಓದುಗರ ಮೆಚ್ಚುಗೆಗೆ ಪಾತ್ರವಾಗಲಿ

ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿಯ ವತಿಯಲ್ಲಿ ಯಲಹಂಕ ನಾಡಿನ ಪ್ರಭುಗಳ ಶಾಖಾ ಬಾಹುಳ್ಯದ ವಿವರಗಳನ್ನೊಳಗೊಂಡ ಪುಸ್ತಕ ಬಿಡುಗಡೆ ಸಮಾರಂಭದ ಅಂಗವಾಗಿ ಒಂದು ಸ್ಮರಣ ಸಂಚಿಕೆಯನ್ನು ಹೊರ ತರಲಾಗುವುದೆಂದು ತಿಳಿದು ಸಂತೋಷವಾಯಿತು. ಬೆಂಗಳೂರು ಮಹಾನಗರವೇ ಅಲ್ಲದೆ ಕರ್ನಾಟಕ ರಾಜ್ಯಕ್ಕೆ ಯಲಹಂಕ ನಾಡಿನ ಪ್ರಭುಗಳ ಮತ್ತು ವಂಶಜರ ಕೊಡುಗೆ ಅಪಾರ. ಅವರ ಧೈರ್ಯ. ಸಾಹಸ, ಪರಾಕ್ರಮ ಮತ್ತು ಜನೋಪ ಯೋಗಿ ಕಾರ್ಯಗಳು ಕನ್ನಡ ನಾಡಿನಲ್ಲಿ ಜನಜನಿತವಾಗಿರುತ್ತದೆ. ಇಂತಹ ಪುರುಷರುಗಳ ವಿಷಯಗಳನ್ನು ಪುಸ್ತಕ ರೂಪದಲ್ಲಿ ಹೊರತರುವುದು ಸ್ತುತ್ಯವಾಗಿದೆ ಬಿಡುಗಡೆಯಾಗಲಿರುವ ಪುಸ್ತಕ ಹಾಗೂ ಸ್ಮರಣ ಸಂಚಿಕೆಗೆ ನನ್ನ ಹಾರ್ದಿಕ ಶುಭಾ ಶಯಗಳನ್ನು ಸಲ್ಲಿಸುವುದರೊಂದಿಗೆ ಅದು ಓದುಗರ ಮೆಚ್ಚುಗೆಗೆ ಪಾತ್ರವಾಗಲೆಂದು ಆಶಿಸುತ್ತೇನೆ.

ಸಹಿ

(ಎಂ. ರಘುಪತಿ)

ತಾ॥ 6-4-84

ಚಂದ್ರಪ್ರಭಾ ಅರಸ್
ಸಮಾಜ ಕಲ್ಯಾಣ ಮತ್ತು ರೇಷ್ಮೆ
ಇಲಾಖೆ ಸಚಿವರು

ವಿಧಾನ ಸೌಧ

ಜನರಲ್ಲಿ ಕೆಚ್ಚೆದೆಯನ್ನು ಮಿಾಟಿ

ಯಲಹಂಕ ನಾಡಿನ ಪ್ರಭುಗಳು ಹಾಗೂ ಅವರ ವಂಶಜರು, ಕನ್ನಡ ನಾಡನ್ನು ಉಳಿಸಿ ಬೆಳೆಸಿ, ನಾಡಿನ ಜನರ ಸುಖಸಮೃದ್ಧಿಗಾಗಿ ತೋರಿದ ಕಾರ್ಯಕೌಶಲ, ಪರಿಶ್ರಮ, ಧೈರ್ಯ-ಸಾಹಸಗಳನ್ನು ಕುರಿತು ಒಂದು ಪುಸ್ತಕವನ್ನು ಹೊರತರಲು ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿಯು ಯೋಜಿಸಿರುವುದು ನಿಜಕ್ಕೂ ಸ್ತುತ್ಯಾರ್ಹಸಂಗತಿ. ಆ ಮೂಲಕ ನಾಡಿನ ಹಿತಕ್ಕಾಗಿ ಹಿಂದೆ ಆಳಿ-ಅಳಿದ ಮಹಾ ನಾಯಕರುಗಳ ಚರಿತ್ರೆಯನ್ನು ಕನ್ನಡ ನಾಡಿನ ಜನರ ಮನ ಮುಟ್ಟಿಸಿ, ಜನರಲ್ಲಿ ತನ್ನತನವನ್ನು, ಕೆಚ್ಚೆದೆಯನ್ನು ಮಿಾಟಿ ಹೊರತರುವ ಕಾರ್ಯದಲ್ಲಿ ಸಮಿತಿಯು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಸಹಿ
(ಚಂದ್ರಪ್ರಭಾ ಅರಸ್)

ತಾ॥ 30-3-1984

ಡಾ॥ ಸರೋಜಿನಿ ಮಹಿಷಿ, ಎಂ.ಪಿ.
ಅಧ್ಯಕ್ಷರು
ಸರೋಜಿನಿ ಮಹಿಷಿ ಸಮಿತಿ

ವಿಧಾನ

ಯಶಸ್ವಿಯಾಗಲಿ

ದಿನಾಂಕ 15-4-1984 ರಂದು ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿಯು ಭದ್ರಾವತಿಯ ಬಿ. ವಿ. ಲಕ್ಷ್ಮಣ್‌ರವರು ಮತ್ತು ಎಸ್. ಎ. ಮಂಜುಳಾಗಂಗಸ್ವಾಮಿಯವರು ಬರೆದಿರುವ ಪುಸ್ತಕದ ಬಿಡುಗಡೆಯ ಸಮಾರಂಭದ ಜೊತೆಗೆ ಸ್ಮರಣ ಸಂಚಿಕೆಯನ್ನು ಹೊರತರುವ ಕಾರ್ಯಕ್ರಮವನ್ನು ತಾವು ಹಮ್ಮಿಕೊಂಡಿರುವುದು ಅಭಿನಂದನೀಯ.

ಕಾರ್ಯಕ್ರಮವು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಸಹಿ
(ಸರೋಜಿನಿ ಮಹಿಷಿ)

ತಾ॥ 9-4-1984

ಎಂ. ಚಂದ್ರಶೇಖರ್, ಬಿ.ಇ.,
ನಗರಾಭಿವೃದ್ಧಿ ಮತ್ತು ಬೆಂಗಳೂರು
ಅಭಿವೃದ್ಧಿ ಪ್ರಾಧಿಕಾರ ಸಚಿವರು

ವಿಧಾನ ಸೌಧ
ಸಂಖ್ಯೆ ಎಂ.ಯುಡಿ/386/84



ಅಭಿನಂದನೀಯ

ಭಾರತದಲ್ಲಿ ಧ್ರುವ ನಕ್ಷತ್ರದಂತೆ ಮಿನುಗುತ್ತಿರುವ ಬೆಂಗಳೂರು ಮಹಾನಗರ ಮೂಲ ಸಂಸ್ಥಾಪಕರಾದ ಮಾಗಡಿ ಕೆಂಪೇಗೌಡರ ಐತಿಹಾಸಿಕ ಘಟನೆಗಳ ಹಿನ್ನೆಲೆಯನ್ನೊಳಗೊಂಡ ಅನೇಕ ವಿಷಯಗಳ ಬಗ್ಗೆ ನಾಡಿನ ವಿದ್ವಾಂಸರಿಂದಲೂ, ಸಂಶೋಧಕರಿಂದಲೂ ಅಮೂಲ್ಯ ಲೇಖನಗಳನ್ನು ಸಂಗ್ರಹಿಸಿ ದಿನಾಂಕ 15-4-1984 ರಂದು ಜರುಗುವ ವೈಭವಪೂರ್ಣಸಮಾರಂಭದಲ್ಲಿ ಒಂದು ಸ್ಮರಣಸಂಚಿಕೆಯನ್ನು ಬಿಡುಗಡೆ ಮಾಡಲು ಪ್ರಯತ್ನಿಸಿರುವ ಸಮಿತಿ ಪದಾಧಿಕಾರಿಗಳ ಕಾರ್ಯ ನಿಜಕ್ಕೂ ಅಭಿನಂದನೀಯವಾದುದು.

ಕರ್ನಾಟಕಕ್ಕೆ ಕಳಶಪ್ರಾಯವಾಗಿರುವ ರಾಜಧಾನಿ ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ವಿಚಾರವನ್ನು ಬೆಂಗಳೂರು ನಗರದ ಪ್ರಸ್ತುತ ಸಂದರ್ಭದಲ್ಲಿ ಪ್ರತಿಯೊಬ್ಬ ಕನ್ನಡಿಗನೂ ತಿಳಿದುಕೊಳ್ಳಬೇಕಾದ ಅವಶ್ಯ ವಿಚಾರವಾಗಿದೆ. ಈ ಬಗ್ಗೆ ನಾಡಿನ ಎಲ್ಲಾ ಜನತೆಯೂ ನಾಡಿನ ಭಾಷೆ, ಕಲೆ, ಸಾಹಿತ್ಯ ಸಂಪ್ರದಾಯ ಸಂಸ್ಕೃತಿಗಳನ್ನು ತಿಳಿದುಕೊಳ್ಳುವುದೂ ಆದ್ಯ ಕರ್ತವ್ಯವೆಂದು ಭಾವಿಸುತ್ತೇನೆ. ಮೇಲ್ಕಂಡ ಶುಭ ಸಮಾರಂಭವು ಯಶಸ್ವಿಯಾಗಿ ನಡೆಯಲೆಂದು ಹಾರೈಸಿ ನನ್ನ ವಿಶ್ವಾಸ ಪೂರ್ವಕವಾದ ಶುಭಾಶಯಗಳನ್ನು ಕೋರುತ್ತೇನೆ.

ಸಹಿ

ತಾ॥ 3.4-1984

(ಎಂ. ಚಂದ್ರಶೇಖರ್)

ಎಸ್. ಆರ್. ಬೊಮ್ಮಾಯಿ
ಕೈಗಾರಿಕೆ ಮತ್ತು ವಾಣಿಜ್ಯಮಂತ್ರಿ

ವಿಧಾನ
No. in IC M 1277-

ಪ್ರಪ್ರಥಮ

ಬೆಂಗಳೂರು ನಗರ ನಿರ್ಮಾಪಕ ಮಾಗಡಿ ಕೆಂಪೇಗೌಡರು ಹಾಗೂ ಅವರ ವಂಶಸ್ಥರು ನಾಡಿನ ನಿರ್ಮಾಣಕ್ಕಾಗಿ, ಜನಹಿತ ಸಾಧನೆಗಾಗಿ ಪ್ರಾಣವನ್ನು ಮುಡುಪಾಗಿಟ್ಟು ಹೋರಾಡಿ, ಎಂದೆಂದಿಗೂ ಮರೆಯಲಾಗದವರಾಗಿದ್ದಾರೆ. ಈ ವಂಶಸ್ಥರ ಬಗ್ಗೆ ಈಗಾಗಲೇ ಸಾಹಿತಿಗಳು, ಇತಿಹಾಸಕಾರರು ತಮ್ಮ ಅನಿಸಿಕೆಗಳನ್ನು ಪ್ರಕಟಿಸಿ ಸಾರಿದ್ದಾರೆ.

ನಿಮ್ಮ ಪತ್ರದಲ್ಲಿ ಉಲ್ಲೇಖಿಸಿರುವಂತೆ ಹಾಗೂ ನನಗೆ ತಿಳಿದ ಮಟ್ಟಿಗೆ, ಯಲಹಂಕ ನಾಡಿನ ಪ್ರಭುಗಳು ಮತ್ತು ಅವರ ವಂಶಜರ ಸಮಗ್ರ ಸಾಧನೆಗಳ ಬಗ್ಗೆ ಶ್ರೀ ಬಿ.ವಿ. ಲಕ್ಷ್ಮಣ್ ಮತ್ತು ಶ್ರೀಮತಿ ಎಸ್. ಎ. ಮಂಜುಳಾರವರು ಬರೆದಿರುವ ಗ್ರಂಥವೇ ಪ್ರಪ್ರಥಮವಾದದ್ದೆಂದು ಕಂಡು ಬರುತ್ತದೆ.

ದಿನಾಂಕ 15-4-1984 ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಈ ಗ್ರಂಥವನ್ನು ಬಿಡುಗಡೆ ಮಾಡುತ್ತಿರುವುದು ಮತ್ತು ಇದರ ಅಂಗವಾಗಿ ಸ್ಮರಣಸಂಚಿಕೆಯನ್ನು ಹೊರತರುತ್ತಿರುವುದು ಅಭಿನಂದನೀಯ. ಪ್ರಚಾರ ಸಮಿತಿಯು ಶ್ರಮವಹಿಸಿ, ನಡೆಸುತ್ತಿರುವ ಈ ಪ್ರಯತ್ನ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಸಹಿ

ತಾ॥ 31-3-84 (ಎಸ್. ಆರ್. ಬೊಮ್ಮಾಯಿ)

ಪ್ರೊ. ಎ. ಲಕ್ಷ್ಮೀಸಾಗರ್
ಕಾನೂನು ಮತ್ತು ಸಂಸದೀಯ
ವ್ಯವಹಾರಗಳು, ವಸತಿ ಹಾಗೂ ಸಾರ್ವಜನಿಕ
ಕುಂದುಕೊರತೆಗಳ ಖಾತೆಯ ಮಂತ್ರಿ

ವಿಧಾನ

ಪ್ರಯೋಜನಕಾರಿಯಾಗಲಿ

ಶ್ರೀ ಬಿ. ವಿ. ಲಕ್ಷ್ಮಣ್ ಹಾಗೂ ಶ್ರೀಮತಿ ಮಂಜುಳಾ ಗಂಗಸ್ವಾಮಿಯವರು ಸಿರುವ ಯಲಹಂಕ ನಾಡಿನ ಪ್ರಭುಗಳ ವಂಶವೃಕ್ಷ ಚರಿತ್ರೆಯ ಬಿಡುಗಡೆ ಸಮಾ ವನ್ನು ದಿನಾಂಕ : 15-4-1984ರಂದು ಏರ್ಪಡಿಸಿರುವ ವಿಷಯ ತಿಳಿದು ಸಂತೋ ವಾಯಿತು.

ಈ ಸಮಾರಂಭ ಯಶಸ್ವಿಯಾಗಿ ನೆರವೇರಲೆಂದೂ ಹಾಗು ಈ ಸಂದರ್ಭದಲ್ಲಿ ಗಡೆಯಾಗಲಿರುವ ಸ್ಮರಣ ಸಂಚಿಕೆ ಹೆಚ್ಚು ಪ್ರಯೋಜನಕಾರಿಯಾಗಲೆಂದು ಹಾ ತ್ತೇನೆ.

ಸಹಿ

ತಾ॥ 31-3-1984 (ಎ. ಲಕ್ಷ್ಮೀಸಾಗರ್)

ಎಂ. ಪಿ. ಪ್ರಕಾಶ್, ಎಂ.ಎ.,ಎಲ್ಎಲ್.ಬಿ.,
ರಾಜ್ಯ ಸಾರಿಗೆ ಸಚಿವರು

ವಿಧಾನ ಸೌಧ
No. MST/172/84

ಹೆಚ್ಚು ಹೆಚ್ಚು ಬರಲಿ

ಬೆಂಗಳೂರು ನಿರ್ಮಾತೃ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿಯವರು ಯಲಹಂಕ ನಾಡಿನ ಪ್ರಭುಗಳ ವಂಶವೃಕದ ಪರಿಚಯ ಮಾಡಿಕೊಡುತ್ತ ಅವರ ವಂಶಜರು ಕೈಗೊಂಡ ಅಗಣಿತ ಜನೋಪಯೋಗಿ ಕಾರ್ಯಗಳನ್ನು ಪ್ರದರ್ಶಿಸಿದ ಶೌರ್ಯ, ತೋರಿಸಿದ ಧೈರ್ಯ ಸ್ಥೈರ್ಯ ಸಾಹಸಗಳ, ನಿರ್ಮಿಸಿದ ಅಸಂಖ್ಯಾತ ಗ್ರಾಮ, ಪಟ್ಟಣಗಳ ಪರಿಚಯ ಮಾಡಿಕೊಡುವ ಹೊತ್ತಿಗೆಯೊಂದನ್ನು ಬಿಡುಗಡೆ ಮಾಡುವ ವಿಚಾರ ಕೇಳಿ ತುಂಬಾ ಸಂತೋಷವಾಯಿತು. ಗತಕಾಲದ ಆಗುಹೋಗುಗಳನ್ನು ಉತ್ಪ್ರೇಕ್ಷೆ ಮಾಡದೆ, ಸತ್ಯವನ್ನು ಮರೆಮಾಚದೆ ನೈಜಸ್ಥಿತಿಯನ್ನು ಈ ಹೊತ್ತಿಗೆಯಲ್ಲಿ ಚಿತ್ರಿಸಿದ್ದಾರೆಂದು ಕೊಂಡಿದ್ದೇನೆ. ಇಂತಹ ಹೊತ್ತಿಗೆಗಳು ಹೆಚ್ಚು ಹೆಚ್ಚು ಬರಲೆಂದೂ ಇವರು ಹಮ್ಮಿಕೊಂಡಿರುವ ಕಾರ್ಯಗಳು ಯಶಸ್ವಿಯಾಗಲೆಂದೂ ಹಾರೈಸುತ್ತೇನೆ.

ಸಹಿ

ತಾ॥ 31-3-84 (ಎಂ. ಪಿ. ಪ್ರಕಾಶ್)

B. L. GOWDA, B.Sc(Agri.),B.L.,
Minister For Agriculture

VIDHANA SOUDHA
ಕೃಶ/ಸಂದೇಶ-೧೩೫/೮೪

ಜನತೆಗೆ ಪರಿಚಯವಾಗಲಿ

ದಿನಾಂಕ 15-4-1984 ರಂದು ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿಯ ವತಿಯಿಂದ ಮಾಗಡಿ ಕೆಂಪೇಗೌಡರ ಜೀವನ ಕುರಿತ ನಾಟಕದ ಕ್ಯಾಸೆಟ್ ಬಿಡುಗಡೆ ಮಾಡುತ್ತಿರುವುದು ತುಂಬಾ ಸಂತಸದ ಸಂಗತಿ. ಈ ಕಾರ್ಯಕ್ರಮದ ಸವಿನೆನಪಿಗಾಗಿ ಸ್ಮರಣಸಂಚಿಕೆಯನ್ನು ಬಿಡುಗಡೆ ಮಾಡುತ್ತಿರುವುದು ತುಂಬಾ ಔಚಿತ್ಯಪೂರ್ಣವಾದ ವಿಚಾರ. ಈ ಶುಭ ಸಂದರ್ಭದಲ್ಲಿ ತಮ್ಮ ಕಾರ್ಯಕ್ರಮ ಯಶಸ್ವಿಯಾಗಿ ಜರುಗಲೆಂದು ಆಶಿಸುತ್ತಾ ತಾವು ಹೊರತರಲಿರುವ ಸ್ಮರಣ ಸಂಚಿಕೆ ಸುಂದರವಾಗಿ ಹಾಗೂ ಕೆಂಪೇಗೌಡರ ಜೀವನ ಚರಿತ್ರೆ ಸಾಮಾನ್ಯ ಜನತೆಗೆ ಪರಿಚಯ ಆಗುವಂತೆ ಹೊರಬರಲೆಂದು ಹಾರೈಸುತ್ತೇನೆ.

ಸಹಿ

ತಾ॥ 29-3-1984 (ಬಿ. ಎಲ್ ಗೌಡ)

ಕೆ. ಜಿ. ಶ್ರೀನಿವಾಸಮೂರ್ತಿ
ವಿಧಾನಸಭಾ ಸದಸ್ಯ, ಸಾತನೂರು ಕ್ಷೇತ್ರ
ಮತ್ತು
ಅಧ್ಯಕ್ಷರು
ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ

ಕನಸು—ನನಸು

ಸುಂದರವಾದ ನಗರ ಬೆಂಗಳೂರಿನಲ್ಲಿ ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿಯವರು ದಿನಾಂಕ 15-4-1984ರಂದು ಕೆಂಪೇಗೌಡರ ಜೀವನ ಚರಿತ್ರೆಯ ಸಮಾರಂಭವನ್ನು ಇಟ್ಟುಕೊಂಡಿರುವುದು ನನಗೆ ತುಂಬಾ ಸಂತೋಷ ದಾಯಕವಾಗಿದೆ. ಈ ಸಮಾರಂಭದಲ್ಲಿ ಉತ್ತರಿಮರ್ಗ ಎಂಬ ಕಥಾಭಾಗವನ್ನು ಬಿಡುಗಡೆ ಮಾಡುತ್ತಿದ್ದಾರೆ. ಕನ್ನಡಿಗರ ಬಹುದಿನಗಳ ಕನಸು ನನಸಾಗುವ ಕಾಲ ಬಂದಿದೆ. ಕಾರ್ಯಕ್ರಮ ಯಶಸ್ವಿಯಾಗಲಿ ಎಂದು ಆಶಿಸುತ್ತೇನೆ.

ಸಹಿ

(ಕೆ. ಜಿ. ಶ್ರೀನಿವಾಸಮೂರ್ತಿ)

ತಾ॥ 6.4.84

ಡಿ. ವೀರೇಂದ್ರ ಹೆಗ್ಗಡೆಯವರು ಧರ್ಮಸ್ಥಳ-574216



ಸರ್ವಸಕಾಲಿಕ

ಪ್ರಪಂಚದಲ್ಲೇ ಗಣನೀಯ ಸ್ಥಾನವನ್ನು ಪಡೆದಿರುವ ನಮ್ಮ ರಾಜ್ಯದ ರಾಜಧಾನಿ ಬೆಂಗಳೂರನ್ನು ಕಟ್ಟಿ ಬೆಳೆಸಿದ ಮಾಗಡಿ ಕೆಂಪೇಗೌಡರ ಹಾಗೂ ಅವರ ವಂಶಜರ ಪರಿಚಯ ಮತ್ತು ಅವರು ಸಲ್ಲಿಸಿರುವ ಸೇವೆಗಳನ್ನು ಜನರಿಗೆ ತಿಳಿಯಪಡಿಸುವ ಸದುದ್ದೇಶದಿಂದ ಮೇಲ್ಕಂಡ ಸಂಸ್ಥೆ ಕಾರ್ಯವೆಸಗುತ್ತಿರುವುದು ಅಭಿನಂದನಾರ್ಹ.

ಪ್ರಸಕ್ತ ಸ್ಮರಣ ಸಂಚಿಕೆಯೊಂದನ್ನು ಪ್ರಕಟಿಸಿ ಬಿಡುಗಡೆಗೊಳಿಸುತ್ತಿರುವುದು ಸರ್ವಸಕಾಲಿಕ.

ತಾ॥ 15-4-84ರಂದು ಆಮಂತ್ರಿತ ಅತಿಥಿಗಳ ದಿವ್ಯ ಉಪಸ್ಥಿತಿಯಲ್ಲಿ ಕೃತಿ ಬಿಡುಗಡೆ ಸಮಾರಂಭವು ಯಶಸ್ವಿಯಾಗಿ ನೆರವೇರುವಂತೆ ಶ್ರೀಸ್ವಾಮಿಯು ಅನುಗ್ರಹಿಸಲೆಂದು ಹಾರೈಸುತ್ತೇನೆ.

ಸಹಿ

ದಿನಾಂಕ9-4-1984 (ಡಿ. ವೀರೇಂದ್ರ ಹೆಗ್ಗಡೆಯವರು)

ಕೆ. ಬಾಲಾಜಿಸಿಂಗ್
ಚಲನಚಿತ್ರ ನಿರ್ಮಾಪಕ

ಚಿಕ್ಕಮಗಳೂ

ಶುಭ ಹಾರೈಕೆ

ಗಂಡು ಮೆಟ್ಟಿಡ ಕನ್ನಡ ನಾಡಿನಲ್ಲಿ ಕನ್ನಡದ ಡಿಂಡಿಮ ಬಾರಿಸಿ ಕನ್ನಡಿಗರ ಹೃದಯ ಸಿಂಹಾಸನದಲ್ಲಿ ನಿರಂತರವಾಗಿ ನೆಲೆಸಿರುವ ಕೆಚ್ಚೆದೆಯ ನಾಯಕ "ಕೆಂಪೇಗೌಡ"ರ ಜೀವನ ಚರಿತ್ರೆಯನ್ನು ಕುರಿತು ಬರೆಯಲಾಗಿರುವ ಪುಸ್ತಕದ ಬಿಡುಗಡೆಯ ಈ ಶುಭ ಸಂದರ್ಭದಲ್ಲಿ ನನ್ನ ಹಾರ್ದಿಕ ಶುಭಾಷಯಗಳು. ಇದೇ ಸಮಯದಲ್ಲಿ ಪ್ರದರ್ಶಿತವಾಗುವ ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡ'ರ ಐತಿಹಾಸಿಕ ನಾಟಕದ ಕರ್ತೃ ಎಸ್.ಕೆ. ಕರೀಂಖಾನ್ ಅವರಿಗೂ ನನ್ನ ಹಾರ್ದಿಕ ಅಭಿನಂದನೆಗಳು ....'ಕಲೆ' ಎಂಬುದು ಕಣ್ಮರೆಯಾಗುತ್ತಿರುವ ಈ ಸಮಯದಲ್ಲಿ ಕಲಾಪೋಷಕ ರಾಗಿ ಮೇಲಿನ ಎಲ್ಲಾ ಕಾರ್ಯಗಳಿಗಾಗಿ ನೆರವು ನೀಡುತ್ತಿರುವ" ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡ'ರ ಪ್ರಚಾರಸಮಿತಿಯವರಿಗೆ ನನ್ನ ಹಾರ್ದಿಕ ಶುಭಾಶಯಗಳು. ಮುಂದೆಯೂ ಈ ಸಮಿತಿಯಿಂದ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಇನ್ನೂ ಹೆಚ್ಚಿನ ಸೇವೆ ಸಲ್ಲಲಿ ಎಂದು ಹಾರೈಸುತ್ತೇನೆ.

ದಿನಾಂಕ 10-4-1984

ಸಹಿ
(ಕೆ. ಬಾಲಾಜಿಸಿಂಗ್)

ಡಿ. ಬಿ. ಚಂದ್ರೇಗೌಡ

ಅಧ್ಯಕ್ಷರು

ಕರ್ನಾಟಕ ವಿಧಾನಸಭೆ

ವಿಧಾನಸೌಧ



ಶುಭವಾಗಲಿ

ದಿನಾಂಕ 15-4-84ರಂದು ನಡೆಯಲಿರುವ ವೈಭವಪೂರ್ಣ ಸಮಾರಂಭದಲ್ಲಿ ಭದ್ರಾವತಿಯ ಶ್ರೀ ಬಿ. ವಿ. ಲಕ್ಷ್ಮಣ್‌ರವರು ಮತ್ತು ಶ್ರೀಮತಿ ಎಸ್. ಎ. ಮಂಜುಳಾ ಗಂಗಸ್ವಾಮಿಯವರು ರಚಿಸಿರುವ ಪುಸ್ತಕವನ್ನು ಬಿಡುಗಡೆ ಮಾಡುತ್ತಿರುವುದನ್ನು ಮತ್ತು ಇದೇ ಸಂದರ್ಭದಲ್ಲಿ ಸಮಾರಂಭದ ಅಂಗವಾಗಿ ಸ್ಮರಣ ಸಂಚಿಕೆಯೊಂದನ್ನು ಹೊರತರಲಿರುವುದನ್ನು ತಿಳಿದು ನನಗೆ ತುಂಬಾ ಸಂತೋಷವಾಯಿತು.

ಸಮಾರಂಭವು ಯಶಸ್ವಿಯಾಗಿ ನಡೆಯಲೆಂದು ಈ ಮೂಲಕ ಶುಭ ಹಾರೈಸುತ್ತೇನೆ.

ಸಹಿ

ದಿನಾಂಕ 3-4-1984 (ಡಿ. ಬಿ. ಚಂದ್ರೇಗೌಡ)

ತುಳಸೀದಾಸ ದಾಸಪ್ಪ

ಬಿಡಾರ - ನವದೆಹಲಿ

ಪ್ರಯತ್ನ ಸಫಲವಾಗಲಿ

ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿಯು ಪರವಾಗಿ ನಡೆಯಲಿರುವ ಕಾರ್ಯಕ್ರಮಗಳೂ ಸಮಯೋಚಿತವೂ, ಪ್ರೇರಕವೂ ಆಗಿರುತ್ತದೆ. ಶ್ರೀ ಬಿ. ವಿ. ಲಕ್ಷ್ಮಣ್ ಮತ್ತು ಎಸ್. ಎ. ಮಂಜುಳಾರವರು ಒಂದು ಉತ್ತಮ ಪ್ರಯತ್ನವನ್ನೇ ಕನ್ನಡಿಗರಿಗೆ ಮಾಡಿದ್ದಾರೆ. ಕನ್ನಡ ಜನತೆಯ ಸ್ವಾಭಿಮಾನ ಹೆಚ್ಚಿಸುವಂತಹ ಡಾ॥ ಜೀವರಾಜ ಆಳ್ವರವರ ಮತ್ತು ತಮ್ಮ ಮುಂದಾಳತ್ವದಲ್ಲಿ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ. ಬೆಂಗಳೂರಿನ ಹಿರಿಮೆ — ಅದರ ಸ್ಥಾಪಕರ ಮುನ್ನೋಟ, ತದನಂತರದ ಆಡಳಿತಗಾರರ ಯೋಜಿತ ಬೆಳವಣಿಗೆಯ ಪ್ರಯತ್ನ, ಮತ್ತು ನಾಗರೀಕರ ಸುಸಂಸ್ಕೃತಿ - ಇವುಗಳ ಸಂಗಮದಿಂದ ಶೋಭಿತವಾಗಿದೆ. ಈ ಹಿರಿಮೆಯನ್ನು ಉಳಿಸಿಕೊಳ್ಳುವ ನಿಮ್ಮ ಪ್ರಯತ್ನ ಸಫಲವಾಗಲಿ ಎಂದು ಆಶಿಸುತ್ತೇನೆ.

ಸಮಿತಿಯ ಎಲ್ಲ ಭಾಂಧವರಿಗೂ ಶುಭಾಶಯಗಳು

ಸಹಿ

ದಿನಾಂಕ 6-4-84 (ತುಳಸೀದಾಸ ದಾಸಪ್ಪ)

ಕಡಿದಾಳ್ ಮಂಜಪ್ಪ ಬೆಂಗಳೂರು

ಯಶ ದೊರೆಯಲಿ

ಬೆಂಗಳೂರು ನಗರದ ಸಂಸ್ಥಾಪಕ ಮಾಗಡಿ ಕೆಂಪೇಗೌಡರ ಜೀವನ ಚರಿತ್ರೆ ಮತ್ತು ಅವರ ಸಾಧನೆಗಳನ್ನೊಳಗೊಂಡ ಗ್ರಂಥವನ್ನು, ಸ್ಮರಣ ಸಂಚಿಕೆಯನ್ನೂ ಕೆಂಪೇ ಗೌಡ ಪ್ರಚಾರ ಸಮಿತಿಯವರು ಹೊರಡಿಸಲಿದ್ದಾರೆಂದು ತಿಳಿದು ಸಂತೋಷ ಪ್ರಚಾರ ಸಮಿತಿಯು ಕೈಗೊಂಡ ಈ ಕಾರ್ಯಕ್ಕೆ ಯಶಸ್ಸು ದೊರೆಯಲೆಂದು ಹಾರೈಸುತ್ತೇನೆ.

ದಿನಾಂಕ 10-4-1984

ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿಯ ಸದಸ್ಯರು



ಮಹಾ ಪೋಷಕರು
ಡಾ|| ಜೀವರಾಜ ಆಳ್ವ
ಕನ್ನಡ ಸಾಂಸ್ಕೃತಿಕ, ಯುವಜನ ಇಲಾಖೆ
ರಾಜ್ಯ ಸಚಿವರು

ವೆಂಕಟೇಶಪ್ಪ
ಅಧ್ಯಕ್ಷರು

ಎಂ. ಡಿ. ಗಂಗರಂಗಯ್ಯ
ಉಪಾಧ್ಯಕ್ಷರು



ಜಿ. ಗಂಗಸ್ವಾಮಯ್ಯ
ಖಜಾಂಚಿ

ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿಯ ಸದಸ್ಯರು

ಎಂ. ಶ್ರೀನಿವಾಸಮೂರ್ತಿ
ಕಾರ್ಯದರ್ಶಿ

ಜಿ. ವಿ. ವೆಂಕಟೇಶ್
ಕಾರ್ಯದರ್ಶಿ

ಕೆ. ರಾಮಣ್ಣ
ಸಹಕಾರ್ಯದರ್ಶಿ



ಎ. ಗುರುಲಿಂಗಯ್ಯ
ಸಹಕಾರ್ಯರ್ಶಿ

ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿಯ ಸದಸ್ಯರು

ಎಸ್. ಎ. ಮಂಜುಳ
(ಲೇಖಕಿ)



ಬಿ. ವಿ. ಲಕ್ಷ್ಮಣ್
(ಲೇಖಕ)

ವಿ. ಚಿನ್ನಮ್ಮ
(ಲೇಖಕಿ)



ಪುಟ್ಟಮ್ಮ
(ಲೇಖಕಿ)

ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿಯ ಧ್ಯೇಯೋದ್ದೇಶಗಳಿಗೆ ಸಹಕರಿಸಿದವರು



ಆರ್. ಚೈತನ್ಯಕುಮಾರ್

ಪ್ರತೀ ಹೆಜ್ಜೆಯಲ್ಲೂ ಮಾರ್ಗದರ್ಶನ, ಸಹಕಾರ ನೀಡಿದ ಚೈತನ್ಯಕುಮಾರ್.

ವಿ. ನಾರಾಯಣ ಸ್ವಾಮಿ

ಎಸ್. ಕೃಷ್ಣರಾಜು [illegible]



ಜಿ. ಎಸ್. ಉದಯಶಂಕರ್



(ಚಿತ್ರ ಬಿ. ಎನ್. ವಸಂತ್ ಕುಮಾರ್)

ಎಸ್. ಕೆ. ಕರೀಂಖಾನ್

ಇವರು ಸುಮಾರು 1902ನೇ ಇಸವಿಯಲ್ಲಿ ಸಕಲೇಶಪುರದಲ್ಲಿ, ಆಫ್ಘಾನೀಸ್ಥಾನದಲ್ಲಿ ಯೋಧರಾಗಿದ್ದ ಶ್ರೀ ಅಬ್ದುಲ್ ರಹಮಾನ್‌ಖಾನ್‌ರ ಮೂರನೇಮಗನಾಗಿ ಜನಿಸಿ ಹಾಸನದಲ್ಲಿ ಆಗಿನ 10ನೇ ತರಗತಿಯನ್ನು ಪೂರೈಸಿದರು, ಚಿಕ್ಕ ವಯಸ್ಸಿನಲ್ಲಿಯೇ ತಂದೆ ತಾಯಿಯರಿಂದ ಬೇರೆಯಾಗಿ ಸ್ವತಂತ್ರ ಹೋರಾಟಗಾರನಾಗಿ ಮಹಾತ್ಮಾಗಾಂಧಿಯವರ ವ್ಯಕ್ತಿತ್ವದ ಆಕರ್ಷಣೆಯೊಂದಿಗೆ ಕಾಂಗ್ರೆಸ್ ಕಟ್ಟಲು ಯೋಧರಾದರು. ಜೈಲವಾಸ ಅನುಭವಿಸಿದರು.

ಭಾರತೀಯ ಸೇವಾದಳದಲ್ಲಿ ಇದ್ದರೂ ಜನಪದ ಕಲೆಯಲ್ಲಿ ಹೆಚ್ಚಿನ ಆಸಕ್ತಿ. ಸ್ವಂತ ರಚಿಸಿ, ಬೀದಿಯಲ್ಲಿ ಹಾಡಿ ಜನಗಳನ್ನು ಕಾಂಗ್ರೆಸ್ ಸೇರಲು ಆಕರ್ಷಿಸಿ ಆಂಗ್ಲರ ವಿರುದ್ಧ ಹೋರಾಡಿದವರು. ಸ್ವತಂತ್ರಾನಂತರ ಕರ್ನಾಟಕ ಏಕೀಕರಣಕ್ಕೂ ಇವರು ಜಾನಪದ ಗೀತೆಗಳನ್ನು ಬೀದಿಗಳಲ್ಲೇ ಹಾಡುತ್ತಾ ಜನರನ್ನು ಆಕರ್ಷಿಸಿ ಕ್ರಾಂತಿಕಾರರಾಗಿದ್ದರು.

1942ರಲ್ಲಿ ಅ. ನ. ಕೃಷ್ಣರಾಯರು ಬರೆದಿರುವ "ನನ್ನನ್ನು ನಾನೇ ಕಂಡೆ" ಎಂಬ ಪುಸ್ತಕದಲ್ಲಿ "ಕನ್ನಡ ಪಂಡಿತರನ್ನು ತಲೆದೂಗಿಸುವಂತಾ ಶೈಲಿ ಗೆಳೆಯ ಕರೀಂಖಾನ್ ಬರಹ" ಎಂದು ಬರೆದಿರುವರು. ಬಾಲ್ಯದಿಂದಲೂ ಜಾನಪದ ಸಾಹಿತ್ಯ ಸೊಗಸಿಗೆ ಮರುಳಾಗಿ ಜಾನಪದ ಸಾಹಿತ್ಯವನ್ನು ಸಂಗ್ರಹಿಸುತ್ತಾ ಕನ್ನಡನಾಡಿನಲ್ಲಿ "ಜನಪದ ಸಾಹಿತಿ" ಎಂದೇ ಪ್ರಸಿದ್ಧರಾಗಿರುವರು. ಬ್ರಹ್ಮಚಾರಿಗಳಾಗಿರುವ ಇವರು 1948ಕ್ಕೆ ಬೆಂಗಳೂರು ಸೇರಿ "ರಾಮರಾಜ್ಯ ಪ್ರಕಾಶನ" ಎಂಬ ಪತ್ರಿಕೆಯ ಪ್ರಕಾಶಕರಾದರು. ನಿಸ್ವಾರ್ಥ, ನಿರಾಡಂಬರ, ಸುಗುಣಶೀಲರು. ಎಲ್ಲರಿಗೂ ಅಣ್ಣನಾಗಿ ಮಹಾ ತ್ಯಾಗಿಗಳಾಗಿರುತ್ತಾರೆ. ಬಡತನ ಇವರನ್ನು ತುಂಬಾ ಪ್ರೀತಿಸುತ್ತದೆ. ಬೆಂಬಲ ದೊರೆಯದ ಕಾರಣ ಇವರು ಬೇಸತ್ತು 1957ರಲ್ಲಿ ಮದ್ರಾಸನ್ನು ಸೇರಿದ್ದರು. ಅಲ್ಲಿ ಸಿನಿಮಾರಂಗ ಪ್ರವೇಶಿಸಿದರು. ಅನೇಕ ನಾಟಕಗಳು ತೆರೆಯಮೇಲೆ ಬಂದಿವೆ. 1948ರಲ್ಲಿ ಮತ್ತೆ ಬೆಂಗಳೂರಿಗೆ ಬಂದರು.

ಈಗಲೂ ಸಕಲೇಶಪುರದಲ್ಲಿ ಅಣ್ಣನು, ಬೆಂಗಳೂರಿನಲ್ಲಿ ತಮ್ಮನು ಇರುವರು. ಇವರು ಯಾರ ಆಶ್ರಯವು ಇಲ್ಲದೆ ಒಂಟಿಯಾಗಿರುತ್ತಾರೆ. ಈಗಲೂ ಬಡಹುಡುಗರ ವಿಧ್ಯಾಭ್ಯಾಸಕ್ಕೆ ಸಹಾಯ ಮಾಡುವುದು, ಅನಾಥರಿಗೆ ತನ್ನಲ್ಲಿರುವುದನ್ನು ನೀಡುವುದು ಇವರಿಂದ ದೂರವಾಗಿಲ್ಲ. ಇವರ ಆದರ್ಶ ಎಲ್ಲರಿಗೂ ಮಾರ್ಗದರ್ಶಿ. ಕನ್ನಡ ನಾಡಿನ ಸಾತಂತ್ರ ಯೋಧ. ಕಲೆಯ ಕಣ್ಮಣಿ. ಜಾತ್ಯಾತೀತ, ನಿಗರ್ವಿ. ನೀತಿ ಶಿರೋಮಣಿ, ಧರ್ಮ ಶ್ರೇಷ್ಠ. ಶ್ರೀ ಎಸ್. ಕೆ. ಕರೀಂಖಾನ್ ದಾದಾಗೆ ಭಗವಂತನು ಆಯುರಾರೋಗ್ಯವನ್ನು ಕೊಟ್ಟು ಸದಾ ಸುಖಿಯಾಗಿಡಲಿ.

ಎಂ. ಡಿ. ಗಂಗರಂಗಯ್ಯ
ತಾ. ಅ. ಮ. ಮಾಜಿ ಸದಸ್ಯ
ಮರಳುಕುಂಟೆ, ನೆಲಮಂಗಲ ತಾ॥



ಬಿ. ವಿ. ಲಕ್ಷ್ಮಣ್

ಶ್ರೀಮಾನ್ ಬಿ. ವಿ. ಲಕ್ಷ್ಮಣ್‌ರವರು ಮಂಡ್ಯಜಿಲ್ಲೆ ನಾಗಮಂಗಲ ತಾಲ್ಲೂಕು ಬೆಟ್ಟದ ಬ್ಯಾಲಕೆರೆ ಗ್ರಾಮದಲ್ಲಿ ಬಡರೈತರಾದ ವೆಂಕಟಪ್ಪಗೌಡ ಮತ್ತು ತಿಮ್ಮಕ್ಕನವರ ಸುಪುತ್ರನಾಗಿ 29-10-1919ರಲ್ಲಿ ಜನಿಸಿದರು. ಜನಿಸಿದ ಏಳುದಿವಸದಲ್ಲಿ ತಾಯಿಯ ಮರಣಾನಂತರ ಸೋದರ ಅತ್ತೆ ಲಕ್ಷ್ಮಮ್ಮನ ಶುಶ್ರೂಷೆಯಲ್ಲಿ 8 ವರ್ಷದವರೆಗೆ ಅಂದರೆ 1927ರ ವರೆಗೆ ಬೆಳೆದು ದುಡಿದುತಿನ್ನಬೇಕೆಂಬ ಮತ್ತು ತಂದೆ ಆಶ್ರಯ ಸಿಗದ ಮಗು ಹಂಗಿನ ಜೀವನಕ್ಕೆ ಬೇಸತ್ತು ಊರನ್ನು ಬಿಡಲು ತೀರ್ಮಾನಿಸಿದ, ನಂತರ ಚಿಕ್ಕಮ್ಮನ ಊರಿಗೆ ಹೋಗಿ ಬರುವುದಾಗಿ ಹೇಳಿ ಭದ್ರಾವತಿಗೆ ರೈಲಿನ ಆಶ್ರಯ ಪಡೆದು ಹೋಗಿ ಸೇರಿ ಅಂದಿನಿಂದ ಜೀವನಕ್ಕಾಗಿ ಕೂಲಿ ಕೆಲಸ ಮಾಡತೊಡಗಿದರು, ಹಾಗೆಯೇ ಶ್ರೀನಿವಾಸಯ್ಯ ಎಂಬ ಬ್ರಾಹ್ಮಣರ ಮನೆಯಲ್ಲಿ ಆಶ್ರಯ ಸಿಕ್ಕಿತು. ಅವರ ಹೆಂಡತಿ ಅನ್ನಪೂರ್ಣಮ್ಮನವರು ಹುಡುಗನ ಬುದ್ಧಿಗೆ ತಕ್ಕಂತೆ ವಿದ್ಯೆ ಇಲ್ಲದ ಕಾರಣ ವಿದ್ಯೆ ಕಲಿಯಲು ಒತ್ತಾಯಿಸಿ ರಾತ್ರಿ ಶಾಲೆಗೆ ಹೋಗಲು ಅನುಮತಿ ಕೊಟ್ಟರು. ಆರುವರ್ಷಕಾಲ ಅವರ ಮಗನಂತೆ ಇದ್ದು 1933ನೇ ಇಸ್ವಿಯಲ್ಲಿ ಅಲ್ಲಿನ ರಾಜಕೀಯ ಮುಖಂಡರ ಸಹವಾಸದಿಂದ ಶ್ರೀ ಮಹಾತ್ಮಗಾಂಧಿಯವರ ತತ್ವಾಕರ್ಷಣೆಯಾಗಿ ಶಿವಪುರದ ಸತ್ಯಾಗ್ರಹವನ್ನು ಸೇರಿದ ಕಾರಣ ಶಿವಮೊಗ್ಗ ಜೈಲುವಾಸ ಎರಡುತಿಂಗಳು ಕಾಲ ಅನುಭವಿಸಿದರು. ಅನಂತರ ಮತ್ತೆ ಬಡಗಿ ಕೆಲಸ ಕಲಿಯಬೇಕು ಎಂಬ ಹಂಬಲದಿಂದ ಅವರೊಡನೆ ಕೂಲಿ ಕೆಲಸಮಾಡಿಕೊಂಡು ಹಳ್ಳಿಯ ನಾಟಕದಲ್ಲಿ ಪಾತ್ರ ಅಭಿನಯಿಸಲು ಪ್ರಾರಂಭವಾಯಿತು. 1943ನೇ ಇಸವಿಯಲ್ಲಿ ಕುರುವೆಕೆರೆ ತಾಲ್ಲೂಕು ಹಾಸಡುಗು ಗ್ರಾಮದ ಹೊಸಟ್ಟಿ ಕೆಂಪನಾಗೇಗೌಡರ ಮಗಳು ಕೆಂಪಮ್ಮನವರೊಂದಿಗೆ ಮದುವೆ ಮಾಡಿದರು. ರಾಜಕೀಯದವರ ಬೆಂಬಲವಿದ್ದ ಕಾರಣ ಸರ್ಕಾರದಿಂದ ಐದು ಎಕರೆ ಜಮೀನು ದೊರೆಯಿತು. ಕೆಂಪಮ್ಮನವರೊಂದಿಗೆ ಸಂಸಾರ ಸಾಗಿತು, ನಾಲ್ಕು ಮಕ್ಕಳನ್ನು ಪಡೆದರು. ಹಣ ಸಂಪಾದನೆ ಸಾಲದ ಕಾರಣ ನಾಟಕದ ಕಂಪನಿ ಕಟ್ಟಬೇಕೆಂಬ ಹಂಬಲಕ್ಕೆ ಸಿಕ್ಕಿ ಜಮೀನು ಪರಾಧೀನವಾಯಿತು. ಕೂಲಿ ಕೆಲಸ ಮುಂದುವರಿಯಿತು ಜೊತೆಗೆ ಸ್ವಾತಂತ್ರ ಹೋರಾಟಗಾರರಾದರು.

1952ರಲ್ಲಿ ಸ್ವಂತ ರಚನೆಮಾಡಿದ್ದ ಮಾಗಡಿ ಕೆಂಪೇಗೌಡ ಎಂಬ ನಾಟಕವನ್ನು ಇದೇ ವರ್ಷದಲ್ಲಿ ಶ್ರೀಮಾನ್ ಎಸ್. ಕೆ. ಕರೀಂಖಾನರ ಪರಿಚಯವಾಗಿ ಅವರ ಅನುಮೋದನೆಯೊಂದಿಗೆ 1954 ರಿಂದ ಅನೇಕ ನಾಟಕ ಪ್ರದರ್ಶನ ಮಾಡಿ ಆಗಿನ ಸರ್ಕಾರದಿಂದ ಪ್ರಶಸ್ತಿಯನ್ನು ಪಡೆದಿರುತ್ತಾರೆ. 1955ರಲ್ಲಿ ಇವರ ಕಲೆ ಪ್ರೋತ್ಸಾಹ ಹೆಚ್ಚಿತು ಆಸೆ ದೊಡ್ಡದಾಯಿತು. ತನ್ನ ಸಂಸಾರ ತಾಪತ್ರಯದಲ್ಲಿದ್ದರು ತನ್ನ ಛಲ ಬಿಡಲಿಲ್ಲ. ನಾಟಕಕಲೆ ಮುಂದುವರಿಯಿತು 1979ರವರೆಗೆ ಶ್ರೀ ಮಾಗಡಿ ಕೆಂಪೇಗೌಡರ ನಾಟಕಕ್ಕೆ ರಜತ ಮಹೋತ್ಸವ. ಸುವರ್ಣಮಹೋತ್ಸವವು, ವಜ್ರಮಹೋತ್ಸವ. ಶತಮಾನೋತ್ಸವವನ್ನು ಆಚರಿಸಲಾಯಿತು. ತನ್ನ ಜೀವನದ ಸುಖ ಬಯಸಲಿಲ್ಲ. 1980 ರಿಂದ ಶ್ರೀಮಾನ್ ಜಿ. ಗಂಗಸ್ವಾಮಯ್ಯನವರ ವಿಶ್ವಾಸ ದೊರೆಯಿತು. ನಂತರ ಕೆಂಪೇಗೌಡರ ವಂಶಸ್ಥರ ಜೀವನ ಚರಿತ್ರೆಯನ್ನು ಆಧಾರ ಸಹಿತ ಬರೆಯಲು ಇವರ ನೆರವಿನಿಂದ ತಮಿಳುನಾಡು, ಆಂಧ್ರ ಮತ್ತು ಕರ್ನಾಟಕದ ಕೆಲವು ಭಾಗಗಳಲ್ಲಿ ಸಂಚರಿಸಿ ಪುರಾತನ ವಸ್ತುಗಳನ್ನು ಮತ್ತು ಗ್ರಂಥಗಳನ್ನು ಸಂಗ್ರಹಿಸಿದರು. ಅದು ಉತ್ತರೀದುರ್ಗ ಎಂಬ ಹೆಸರಿನಿಂದ ಹೊರಬರುತ್ತಿದೆ.

1964 ರಲ್ಲಿ ತಮ್ಮ ಪತ್ನಿ ಕೆಂಪಮ್ಮನವರು ಕಾಲವಾದಂದಿನಿಂದ ಇಲ್ಲಿಯವರೆವಿಗೂ ಮಕ್ಕಳ ಪ್ರಗತಿಗೆ ಕುಂಠಿತವಾಗದಂತೆ ಛಲದಿಂದ ಅದೇ ಬಡತನದಿಂದ ಅನೇಕ ಗಣ್ಯರ ವಿಶ್ವಾಸದಿಂದ ಬಾಳಿನುದ್ದಕ್ಕೂ ಕೆಂಪೇಗೌಡನ ಹೆಸರಿನಲ್ಲಿ ಛಲದಿಂದ ಬಾಳಿದ ಇವರಿಗೆ ದೇವರು ಆಯುರಾರೋಗ್ಯ ಐಶ್ವರ್ಯವನ್ನು ಕೊಟ್ಟು ಇನ್ನು ಮೇಲಾದರೂ ಭಗವಂತನು ನೆಮ್ಮದಿ ಕೊಟ್ಟು ಕಾಪಾಡಲೆಂದು ಹಾರೈಸುತ್ತೇನೆ.

ಎಂ. ಬಿ. ಗಂಗರಂಗಯ್ಯ
ತಾ. ಅ. ಮ. ಮಾಜಿ ಸದಸ್ಯ
ಮರಳು ಕುಂಟೆ, ನೆಲಮಂಗಲ ತಾಲ್ಲೂಕು.



ಕೆ. ಜಯರಾಂ
(ಲೇಖಕ)

ಎಂ. ಆರ್. ಸುಬ್ಬರಾಂ
ನಾಟಕ ನಿರ್ದೇಶಕರು



ಹೆಚ್. ಗಂಗಪ್ಪ
(ಲೇಖಕ)

ಬಿ. ಎಲ್. ಗೌರಮ್ಮ
(ಲೇಖಕಿ)

ನಾಟಕಕ್ಕೆ ಸಂಗೀತ ಒದಗಿಸಿದ ಸಂಗೀತ ನಿರ್ದೇಶಕ ಆರ್. ದಾನೋದರ್ ಮತ್ತು ಅವರ ತಂಡ



ಮಹಾ ಪ್ರಭು

ಮಾಗಡಿ ಕೆಂಪೇಗೌಡರು

ಮಾಗಡಿ ಆಳ್ವಿಕೆ 1705-1740

ಹಾರ್ದಿಕ ಶುಭಾಶಯಗಳು

ಬಿ. ಅನುಸೂಯ, ಎಂ.ಬಿ,ಬಿ.ಎಸ್.
ಆರೋಗ್ಯಾಧಿಕಾರಿ, ಮಂಡ್ಯ

Dr. S. A. RANGANATH
Medical Registrar
Jamica, West Indies
(S. A. Manjula Brother)

ನಾರಾಯಣಗೌಡ

ಚಿರಸ್ಮರಣೆ



ದೇವರಾಜ ಅರಸ್
[ಮಾಜಿ ಮುಖ್ಯಮಂತ್ರಿ]

ಚಂಗಲರಾಯ ರೆಡ್ಡಿ
[ಮಾಜಿ ಮುಖ್ಯಮಂತ್ರಿ]

ಹೆಚ್. ಸಿ. ದಾಸಪ್ಪ
[ಮಾಜಿ ಕೇಂದ್ರಮಂತ್ರಿಗಳು]

ಆರ್. ಎನ್. ಯೋಗರಾಜು

ಚಿರಸ್ಮರಣೆ

ದೊಡ್ಡ ತಮ್ಮಣ್ಣ

ಯಶೋಧಮ್ಮ ದಾಸಪ್ಪ

ಕೆ. ಹೆಚ್. ರಾಮಯ್ಯ

ಹೊಂಬೇಗೌಡ

ಚಿರಸ್ಮರಣೆ

"ರಾಜಕಾರ್ಯ ಪ್ರವೀಣ"



ದಿವಂಗತ ಜೆ. ಅಪ್ಪಾಜಿಗೌಡರು

1892, ಜುಲೈ ಒಂದರಂದು ಇವರ ಜನನ. ಬಿ.ಎ.(ಆನರ್ಸ್) ಮುಗಿಸಿ ಆಗಿನ ಮೈಸೂರು ಸರ್ಕಾರದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ 3-12-1917 ರಿಂದ ಕೆಲಸಕ್ಕೆ ಸೇರಿದರು. 1936ರಲ್ಲಿ ಜಿಲ್ಲಾಧಿಕಾರಿಯಾಗಿ, 1938ರಲ್ಲಿ ಸಚಿವಾಲಯದಲ್ಲಿ ಸರ್ಕಾರದ ಕಾರ್ಯದರ್ಶಿಯಾಗಿದ್ದರು 20-1-1943 ರಿಂದ ಆಗಿನ ಮೈಸೂರು ಸರ್ಕಾರದ ಮುಖ್ಯಕಾರ್ಯದರ್ಶಿಯಾಗಿ ನೇಮಕವಾದರು.

ಇಷ್ಟಲ್ಲದೇ ಶಿಕ್ಷಣ ಮಂತ್ರಿಯಾಗಿ, ಆರ್ಥಿಕ ಅಭಿವೃದ್ಧಿ ಮತ್ತು ಯೋಜನಾಕಮೀಷನರ್‌ರಾಗಿ ಆ್ಯಂಟಿ ಕರಪ್ಷನ್ ಅಂಡ್ ಎಫಿಶಿಯನ್ಸಿ ಆಡಿಟ್ ನಿರ್ದೇಶಕರಾಗಿದ್ದರು. 1947ರ ಆಗಸ್ಟ್‌ನಲ್ಲಿ ಕಂದಾಯ ಮಂತ್ರಿಯೂ ಆಗಿದ್ದರು. ಮೈಸೂರು ಮಹಾರಾಜರು ಇವರಿಗೆ "ರಾಜಕಾರ್ಯ ಪ್ರವೀಣ" ಎಂಬ ಬಿರುದು ನೀಡಿದ್ದರು. 1948ರಲ್ಲಿ ನಿವೃತ್ತರಾದ ಮೇಲೂ ಆ್ಯಂಟಿ ಕರಪ್ಷನ್ ಅಂಡ್ ಎಫಿಶಿಯನ್ಸಿ ಆಡಿಟ್‌ನಲ್ಲಿ ವಿಶೇಷ ಅಧಿಕಾರಿಯಾಗಿ ಮತ್ತು ಸ್ಟೋರ್ಸ್ ಪರ್‌ಚೇಸ್ ಕಮಿಟಿಯ ಚೇರ್‌ಮನ್ ಸಹ ಆಗಿ ಕೆಲಸ ನಿರ್ವಹಿಸಿದ್ದರು.

ಇವರು ನಮ್ಮನ್ನು ಅಗಲಿದ್ದು 11-7-1962ರಂದು.

ಜನಪ್ರಿಯ ಆಡಳಿತಗಾರರಾಗಿ, ನಿಷ್ಠೆ, ಪ್ರಾಮಾಣಿಕವಾಗಿ ಜನಸೇವೆ ಮಾಡಿದ ಶ್ರೀ ಜೆ. ಅಪ್ಪಾಜಿಗೌಡರ ಜೀವನ ದರ್ಶನ ನಮಗೆಲ್ಲಾ ಇಂದಿಗೂ ದಾರಿದೀಪ.

ಚಿರಸ್ಮರಣೆ

ದಿವಂಗತ ಕೆ. ರಾಮಯ್ಯ

ಫಿಲಿಫೈನ್ಸ್ ದೇಶದಲ್ಲಿ ಏಶಿಯನ್ ಅಭಿವೃದ್ಧಿ ಬ್ಯಾಂಕ್ ಮತ್ತು
ರಾಷ್ಟ್ರೀಯ ಸಹಕಾರಿ ಬ್ಯಾಂಕ್‌ಗೆ ಕಾಯಿದೆ, ಕಾನೂನು ರಚಿಸಿ
ಕೊಟ್ಟವರೇ ದಿವಂಗತ ಶ್ರೀ ಕೆ. ರಾಮಯ್ಯನವರು.
ಬಿ.ಎಸ್‌ಸಿ., ಎಂ.ಎಸ್‌ಸಿ. ಪಡೆದು ಅಮೇರಿಕದಲ್ಲಿ ವ್ಯವಸಾಯ ವಿಷಯ
ದಲ್ಲೂ ಎಂ.ಎಸ್. ಪದವಿ ಪಡೆದಿದ್ದರು.
ಖ್ಯಾತ ಆರ್ಥಿಕತಜ್ಞರು ಆಗಿದ್ದರು.

ಚಿರಸ್ಮರಣೆ

ದಿವಂಗತ ಡಿ. ರಾಜಗೋಪಾಲ್
B.A., MPA,
ಕಾರ್ಮಿಕ ನಾಯಕ
Ex. MLC
(18 ವರ್ಷಗಳಕಾಲ)

ಚಿರಸ್ಮರಣೆ

ಪೂಜ್ಯ ಮಾತಾಪಿತೃಗಳಾದ



ದಿ|| ಪಟೇಲ್ ಶಿವಣ್ಣಗೌಡರು ಮತ್ತು ದಿ|| ಶ್ರೀಮತಿ ಶಾತಮ್ಮನವರು

ಜವರಪ್ಪ ಮತ್ತು ಸಹೋದರರು
(ಮಕ್ಕಳು)

ಮಾಜಿ ಮುಖ್ಯಮಂತ್ರಿ

ದಿ|| ಕೆ. ಹನುಮಂತಯ್ಯ

ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿಯ
ಧ್ಯೇಯೋದ್ದೇಶಗಳಿಗೆ ಸಹಕರಿಸಿದವರು

ಕಡಿದಾಳ್ ಮಂಜಪ್ಪ



ನಂದೀಶಪ್ಪ

ಮಹದೇವಯ್ಯ

ವನಜಾಕ್ಷಮ್ಮ ಮಹದೇವಯ್ಯ

ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿಯ ಧ್ಯೇಯೋದ್ದೇಶಗಳಿಗೆ ಸಹಕರಿಸಿದವರು



ಹೆಚ್. ಎಲ್ಲಪ್ಪ
ಎಕ್ಸಿಕ್ಯೂಟಿವ್ ಇಂಜನಿಯರ್

ಎಂ. ಎಸ್. ಸಿದ್ಧರಾಜು

ರಾಜಕುಮಾರ್



ಚಿಟ್ಟಿಸ್ವಾಮಿ ಗೌಡ
ಮಾಜಿಶಾಸಕ

ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿಯ ಧ್ಯೇಯೋದ್ದೇಶಗಳಿಗೆ ಸಹಕರಿಸಿದವರು



ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿ

ಬೆಂಗಳೂರು-2 ಇವರಿಗೆ

ರಣಭೈರೇಗೌಡರ ಭಾವಚಿತ್ರವನ್ನು ಒದಗಿಸಿಕೊಟ್ಟ ಧಾನಿಗಳು

ಶ್ರೀಮತಿ ಪುಟ್ಟಮ್ಮ

ದಿವಂಗತ ಪಟೇಲ್ ಅಣ್ಣೇಗೌಡರ ಧರ್ಮಪತ್ನಿ ಗೆದ್ದಲ ಹಳ್ಳಿ ಬೆಂ-24

ಎಲ್. ಬಿ. ಶಿವಲಿಂಗಯ್ಯ

ಉಪಾಧ್ಯಕ್ಷ ಒಕ್ಕಲಿಗರ ಸಂಘ

ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿಯ
ಧ್ಯೇಯೋದ್ದೇಶಗಳಿಗೆ ಸಹಕರಿಸಿದವರು



ದೊಡ್ಡ ಕೆಂಪೇಗೌಡರು

ರಾಮಯ್ಯ



ಅಪ್ಪಯ್ಯಣ್ಣ

ಪಟೇಲ್ ಬಚ್ಚಣ್ಣ

ತಪೋದ್ಗಿರಿ

— ಎಸ್. ಎ. ಮಂಜುಳ

ದೇವ—ಮಾನವ—ದಾನವ, ಪರಂಪರೆಯ ಸನಾತನ ಧರ್ಮದ, ವಿವಿಧ ಮಹಾ ಧರ್ಮ ತತ್ವಗಳನ್ನು ದೇಶ-ವಿದೇಶಗಳಲ್ಲಿ ಸಾರಿ ಧರ್ಮೋನ್ನತಿಗೆ ಸಾಧಿಸಿದ ವಿಶ್ವದ ಏಕೈಕ ರಾಷ್ಟ್ರ ಭಾರತ.

ನಮ್ಮ ದೇಶ ಕರ್ಮಭೂಮಿ-ಧರ್ಮಭೂಮಿ-ದಯಾ ಭೂಮಿ.

ಆದಿ-ಅಂತ್ಯವಿಲ್ಲದ, ವಿಜ್ಞಾನದ ಅಂತರಾಳಕ್ಕೂ ನಿಲುಕದ ಅಗಮ್ಯವಾದ, ಜಗದ ವಿಚಿತ್ರ ರಹಸ್ಯಗಳನ್ನು ಸಾರುವ ವೇದಗಳ ಉಗಮ ಸ್ಥಳ ಭಾರತ.

ದೈವ ಸಾಕ್ಷಾತ್ಕಾರ ಮಾಡಿಕೊಂಡ, ಸನಾತನ ಋಷಿ ಮುನಿಗಳ ಜನ್ಮ ತಪೋಭೂಮಿ. ಶೃತಿ-ಸ್ಮೃತಿ, ಆಗಮ-ನಿಗಮ, ಉಪನಿಷತ್ತು, ಪುರಾಣ-ಇತಿಹಾಸಗಳ ಸಂಗಮಕ್ಷೇತ್ರವಾಗಿದೆ ನಮ್ಮ ಈ ದೇಶ.

ಅನಂತ ಅವತಾರಗಳನ್ನು ತಾಳಿ, ಧರ್ಮೋದ್ಧಾರಕ್ಕೆ ಅಣಿಯಾಗುವ ದೇವ-ಮಹಾದೇವರುಗಳು ಪ್ರತ್ಯಕ್ಷವಾದದ್ದು ನಮ್ಮ ದೇಶದಲ್ಲೇ. ಇಂತಹ ರಾಷ್ಟ್ರದಲ್ಲಿ, ಇತಿಹಾಸ ಪ್ರಸಿದ್ಧವಾದ ಕರ್ನಾಟಕ ರಾಜ್ಯದಲ್ಲಿ ಧರ್ಮಕ್ಷೇತ್ರವಾದ "ತಪೋದ್ಗಿರಿ" ಅತ್ಯಂತ ಪವಿತ್ರ ಸ್ಥಳವಾಗಿದೆ. ಇಲ್ಲಿನ ಪ್ರಾಚೀನ ಕಥೆ ಹೀಗಿದೆ.

ಕಾಲಭೈರವ

ಶಾಂತಿ ಸಮಾಧಿಯಿಂದ ಹೊರಬಂದ ಪರಶಿವನು, ದುಷ್ಟ ರಾಕ್ಷಸರ ಧ್ವಂಸಕ್ಕೆ ನಂದಿಯನ್ನು ಕಾಲಭೈರವನಾಗಿ ಕಳುಹಿಸಿದ. ಆ ಕಾಲಭೈರವ ಮಂಜುಳಾಕಾರನಾಗಿ ನೆಲೆನಿಂತ ಸ್ಥಳವೇ ಈ ಪುಣ್ಯಭೂಮಿ. ಭಕ್ತಜನರ ಕಲ್ಯಾಣಕಾರಕವಾದ ಶ್ರೇಷ್ಠಭೂಮಿ. ಇದು ನಾಗಮಂಗಲ ತಾಲ್ಲೋಕಿನಲ್ಲಿದೆ ಮತ್ತು ಸಮುದ್ರ ಮಟ್ಟದಿಂದ 3321 ಅಡಿಗಳ ಎತ್ತರದಲ್ಲಿ, ನಿಸರ್ಗ ಸಂಪತ್ತಿನ ಮಧ್ಯೆ ಕಂಗೊಳಿಸುವ ಪವಿತ್ರ ಕ್ಷೇತ್ರ.

ಈ ಕ್ಷೇತ್ರವು ಮೇಲುಕೋಟೆ ಮತ್ತು ಶ್ರವಣ ಬೆಳಗೊಳಗಳನ್ನು ಒಳಗೊಂಡು ತ್ರಿಕೋಣಾಕಾರದ ಮೂರನೆಯ ಬಿಂದುವಾಗಿದೆ.

ಈ ಕ್ಷೇತ್ರದಲ್ಲಿ ಅನೇಕ ಶಿಲಾಶಾಸನಗಳು, ವೀರಗಲ್ಲುಗಳು ಇವೆ. ವಿಜಯನಗರದ ಅರಸರ ಕಾಲದಲ್ಲಿ, ಗಂಡಕಠಾರಿ, ಸಾಳ್ವ ನರಸಿಂಹರಾಜನ ಪ್ರಧಾನಿ, ವಿರೂಪಾಕ್ಷ ದೇವಣ್ಣನು ಇಲ್ಲಿಯ ದೇವರಿಗೆ ಚುಂಚನಹಳ್ಳಿ ಗ್ರಾಮವನ್ನು ದತ್ತಿಕೊಟ್ಟನೆಂದು ಶಾಸನವಿದೆ.

ಈ ಕ್ಷೇತ್ರದ ಗಿರಿಯ ಮೇಲೂ ಮತ್ತು ಅದರ ಸುತ್ತಮುತ್ತಲೂ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ನಡುಬೆಟ್ಟದಲ್ಲಿರುವ ಶ್ರೀಮಠ, ಬಂಡೆಯ ಬಸವಣ್ಣ, ಗಂಗಾಧರೇಶ್ವರ ಸ್ವಾಮಿಯ ದೇವಸ್ಥಾನ, ಪಂಚಲಿಂಗಗಳು, ಕಡಿದಾದ ಆಕಾಶ ಭೈರವ ಶಿಖರ ಮತ್ತು ಚೇಳೂರು ಕಂಬ, ಮಠದ ದಕ್ಷಿಣ ದಿಕ್ಕಿಗಿರುವ ಬಿಂದು ಸರೋವರ, ಪ್ರತಿಧ್ವನಿ ಕೊಡುವ ಮೇದರ ಗುಡ್ಡ, ಉರಿಗದ್ದಿಗೆ, ಕಂಬದಮ್ಮ ಇವೇ ಮೊದಲಾದವುಗಳನ್ನು ನೋಡಬಹುದಾಗಿದೆ.

ಆದಿ ಚುಂಚನಗಿರಿ ಮಠವು ಧರ್ಮ, ಸಾಹಿತ್ಯ ಮತ್ತು ಸಂಸ್ಕೃತಿಗಳ ಪ್ರಗತಿಗಾಗಿ ಸೇವೆ ಸಲ್ಲಿಸುತ್ತಲಿದೆ.

ತಪೋದ್ಗಿರಿಯು ತಪಸ್ಸಿಗನುಕೂಲವಾದ ಪುಣ್ಯಸ್ಥಳಗಳಲ್ಲೊಂದು. ಈ ರಮಣೀಯ ಪ್ರಕೃತಿಯ ಸೊಬಗಿಗೆ ಮನಸೋತು, ಅಗಸ್ತ್ಯ ಋಷಿಗಳು ತಮ್ಮ ಶಿಷ್ಯರನ್ನೊಳಗೊಂಡು. ಲೋಕ ಕಲ್ಯಾಣಾರ್ಥವಾಗಿ ಇಲ್ಲಿಯೇ ತಪಸ್ಸನಾಚರಿಸಿಕೊಂಡು ವಾಸಿಸುತ್ತಿದ್ದರು. ಇದು ತಪಸ್ಸಿಗೆ ಯೋಗ್ಯ ಸ್ಥಳವಾದ್ದರಿಂದಲೇ ಇದಕ್ಕೆ "ತಪೋದ್ಗಿರಿ" ಎಂದಾಯಿತು.

ಅತ್ತ ವಿಂಧ್ಯರಾಜ ದಿನದಿನಕ್ಕೂ ಬೆಳೆಯುತ್ತಲೇ ಇದ್ದ. ಇವನ ಬೆಳವಣಿಗೆಯಿಂದ ಸೂರ್ಯ ಚಂದ್ರರ ಸಂಚಾರಕ್ಕೆ ಅಡ್ಡಿಯಾಗುತ್ತಿತ್ತು. ಆ ಕಾರಣದಿಂದ ಅವರಿಬ್ಬರೂ, ಅಗಸ್ತ್ಯ ಋಷಿಗಳಲ್ಲಿ ಶರಣಾಗಿ ವಿಂಧ್ಯನ ಬೆಳವಣಿಗೆಯನ್ನು ತಗ್ಗಿಸುವಂತೆ ಕೇಳಿಕೊಳ್ಳುತ್ತಾರೆ. ಆಗ ಅವರ ಮೊರೆಗೆ ಒಪ್ಪಿ ಋಷಿಗಳು ವಿಂಧ್ಯರಾಜನನ್ನು ಕರೆದು "ನಾನು ದಕ್ಷಿಣದ ಕಡೆಗೆ ಲೋಕ ಕಲ್ಯಾಣಾರ್ಥವಾಗಿ ಹೋಗಬೇಕಾಗಿದೆ. ಆದ್ದರಿಂದ ನಾನು ಬರುವವರೆಗೂ ನಿನ್ನ ಬೆಳವಣಿಗೆಯನ್ನು ತಗ್ಗಿಸು" ಎಂದು ಕೇಳಿಕೊಳ್ಳುತ್ತಾರೆ. ಋಷಿಗಳ ಮಾತಿಗೆ ಬೆಲೆಕೊಟ್ಟ ವಿಂಧ್ಯರಾಜನು ಹಾಗೆಯೇ ಮಾಡಿದ.

ಹಾಗೆಯೇ ದಕ್ಷಿಣದ ಕಡೆಗೆ ಬಂದಾಗ ಈ ನಯನ ಮನೋಹರ ರಮ್ಯತೆಗೆ ತಲೆಬಾಗಿ ಇಲ್ಲಿಯೇ ತಪವನ್ನು ಆಚರಿಸಿದರು.

ಹೀಗಿರುವಲ್ಲಿ ಲೋಕಕಂಟಕರಾದ ಚುಂಚ ಮತ್ತು ಕೆಂಚ ಎಂಬ ಈರ್ವರು ರಾಕ್ಷಸರು. ಆ ಸರಹದ್ದಿನಲ್ಲೇ ವಾಸಿಸುತ್ತಿದ್ದರು. ಇವರು ಜನಸಾಮಾನ್ಯರಿಗೂ, ಸಾಧುಸಂತರಿಗೂ ಕಿರುಕುಳ ಕೊಟ್ಟು ನೆಮ್ಮದಿ ಬಾಳಿಗೆ ಭಂಗವನ್ನುಂಟು ಮಾಡುತ್ತಿದ್ದರು. ಕಂಗೆಟ್ಟ ಇವರು ದೇವದೇವನಾದ ಪರಮೇಶ್ವರನಲ್ಲಿ ಮೊರೆ ಇಟ್ಟರು. ಪರಮೇಶ್ವರನ ಆದೇಶದಂತೆ ನಾರದರು ತಪೋದ್ಗಿರಿಗೆ ಬಂದರು. ಇಲ್ಲಿನ ಭಯಂಕರ ವಾತಾವರಣವನ್ನು ಕಂಡ ನಾರದರು ಅದಕ್ಕೆ ಕಾರಣರಾದ ಚುಂಚ ಮತ್ತು ಕೆಂಚರ ಬಗ್ಗೆ ಪರಮೇಶ್ವರನಿಗೆ ವರದಿ ಒಪ್ಪಿಸಿದಾಗ ಪರಮೇಶ್ವರನು ನಂದಿಯನ್ನು ಕರೆದು ತಕ್ಷಣ ತಪೋದ್ಗಿರಿಗೆ ತೆರಳಿ ದುಷ್ಟ ರಾಕ್ಷಸರನ್ನು ಸದೆ ಬಡಿದು ಸದ್ಗುಣವಂತರನ್ನು ರಕ್ಷಿಸಿ ಅಲ್ಲಿಯೇ ಕಾಲ ಭೈರವನಾಗಿ ನೆಲಸಿ, ಭಕ್ತರ ಇಷ್ಟಾರ್ಥವನ್ನು ನೆರವೇರಿಸುವಂತೆ ಆದೇಶವಿತ್ತನು.

ಕಂಬದಮ್ಮ

ಅಂತೆಯೇ ಕಾಲಭೈರವನು ತಪೋದ್ಗಿರಿಗೆ ಬಂದು ನೆಲಸಿದಾಗಿನಿಂದ ಅಲ್ಲಿನ ವಾತಾವರಣ ತಿಳಿಯಾಗುತ್ತಾ ಬಂತು. ಅಗಸ್ತ್ಯ ಋಷಿ ಗಂಟಾಂತರದಿಂದ ಗುಹೆಯೊಳಕ್ಕೆ (ಗಳಿಗಲ್) ಓಡಿದಾಗ, ಆತನ ಪತ್ನಿ ದಿಕ್ಕೆಟ್ಟು ಪರಶಿವನನ್ನು ಧ್ಯಾನಿಸುವಳು. ಆಗ ಕಾಲಭೈರವೇಶ್ವರನ ಕೃಪೆಯಿಂದ ಲೋಪಮುದ್ರೆಯು ಕಲ್ಲಾದಳು. ಎಲ್ಲರಿಗೂ ಉಪದ್ರವ ಕೊಡುತ್ತಿದ್ದ ಚುಂಡ ಮತ್ತು ಕೆಂಚರು ಕಾಲಭೈರವೇಶ್ವರನಿಂದ ವಧೆಯಾದರು ಮತ್ತು ಆ ಕಲ್ಲಿಗೆ ಆಹುತಿ ಕೊಡಲ್ಪಟ್ಟರು. ಈಗ ಆ ಕಲ್ಲಿಗೆ ಕಂಬದಮ್ಮನೆಂದು ಕರೆಯುತ್ತಾರೆ.

ಇತ್ತ ಆರಣೆಗ್ರಾಮದ ದೊರೆ ಮಕ್ಕಳಿಲ್ಲದೆ ಪರಿತಪಿಸುತ್ತಿದ್ದ. ಇದನ್ನು ಅರಿತ ಭೈರವೇಶ್ವರನು, ಜಂಗಮ ವೇಷಧಾರಿಯಾಗಿ ಆ ರಾಜದಂಪತಿಗಳಿಗೆ ಸಂದರ್ಶನವಿತ್ತನು. ಬಹು ಆನಂದ ಪರವಶರಾಗಿ, ಭಕ್ತಿಭಾವದಿಂದ, ಆ ಜಂಗಮನ ಪಾದಪೂಜೆ ಮಾಡಿ, ತಮ್ಮ ಬಯಕೆಯನ್ನು ತೋಡಿಕೊಂಡರು. ಅವರ ಭಕ್ತಿಗೆ ಮೆಚ್ಚಿದ ಜಂಗಮ ವೇಷಧಾರಿ ಭೈರವೇಶ್ವರನು ತನ್ನ ಮಾಯೆಯಿಂದ ಸೃಷ್ಟಿಸಿದ ಫಲವೊಂದನ್ನು ಅವರಿಗೆ ಕೊಟ್ಟು ಅದೃಶ್ಯನಾದ.

ಆ ಫಲವನ್ನು ಭಕ್ತಿಯಿಂದ ಭಕ್ಷಿಸಿದ ಆ ರಾಜದಂಪತಿಗಳಿಗೆ ಕೆಲವೇ ತಿಂಗಳಲ್ಲಿ ತೇಜ ಪುಂಜದ ಗಂಡುಮಗುವೊಂದು ಲಭ್ಯವಾಯಿತು. ಆದರೆ ಮಗುವಿನ ಕಣ್ಣು ಮಾತ್ರ ಸದಾ ಮುಚ್ಚಿಕೊಂಡಿರುವುದು, ರಾಜದಂಪತಿಗಳಿಗೆ ಸಮಸ್ಯೆಯಾಯಿತು. ಮತ್ತೆ ಭೈರವೇಶ್ವರನನ್ನು ಮೊರೆಹೊಕ್ಕರು. ವೇಷಧಾರಿಯಾಗಿ ಪ್ರತ್ಯಕ್ಷನಾದ ಭೈರವೇಶ್ವರನು "ಎಲೈ ರಾಜನೇ, ಗಿಣ್ಣಿಲ್ಲದ ಬಿದಿರನ್ನು ತರಿಸಿ, ಅದರಲ್ಲಿ ತೊಟ್ಟಿಲೊಂದನ್ನು ಮಾಡಿ ಅದರಲ್ಲಿ ಮಲಗಿಸಿದ ಕೂಡಲೇ ಕಣ್ಣು ಬಿಡುವುದು ಎಂದು ಹೇಳಿ ಅದೃಶ್ಯನಾದನು.

ಆಗ ರಾಜನು ಐವರು ಮೇದರನ್ನು ಕರೆಸಿ ಗಿಣ್ಣಿಲ್ಲದ ಬಿದಿರನ್ನು ಹುಡುಕಿ ತರಲು ಆಜ್ಞಾಪಿಸಿದನು. ಅವರ ಪೈಕಿ ಮೂವರು ತಪೋದ್ಗಿರಿಯ ಕಡೆಗೂ, ಉಳಿದಿಬ್ಬರು ಮಲ್ಲೇಶ್ವರ ಸ್ವಾಮಿ ಬೆಟ್ಟದ ಕಡೆಗೂ ಪ್ರಯಾಣ ಬೆಳೆಸಿದರು.

ತಪೋದ್ಗಿರಿಯ ಭಾಗವನ್ನೆಲ್ಲಾ ಗಿಣ್ಣಿಲ್ಲದ ಬಿದಿರಿಗಾಗಿ ಹುಡುಕಾಡಿ ಪ್ರಯಾಸಗೊಂಡ ಆ ಮೂವರು ಮೇದರು ವಿಶ್ರಮಿಸಿಕೊಳ್ಳಲು ಬಿಲ್ವ ವೃಕ್ಷವೊಂದರ ಕೆಳಗೆ ಪವಡಿಸಿರುವಾಗ ಅದೃಶ್ಯವಾಣಿಯೊಂದು "ಇಲ್ಲಿ ಬಾ" ಎಂದು ಕರೆಯಿತು. ಆಶ್ಚರ್ಯದಿಂದ ಪುಳಕಿತರಾದ ಈ ಮೂವರೂ ಆ ನಾದವನ್ನೇ ಹಿಂಬಾಲಿಸಿ ಹೋದರು. ಸ್ವಲ್ಪ ದೂರದಲ್ಲೇ ಬಿದಿರಿನ ಪೊದೆ ಒಂದು ಕಂಡುಬಂತು. ಆ ಪೊದೆಯಲ್ಲಿ ಗಿಣ್ಣಿಲ್ಲದ ಬಿದಿರೊಂದು ಕಾಣಿಸಿತು.

ಹರಿದ ರಕ್ತ

ಪರಮಾಶ್ಚರ್ಯ ! ಸಂತೋಷದಿಂದ ಅವರಲ್ಲಿ ದೊಡ್ಡವನು ತನ್ನ ಕೈಲಿದ್ದ ಮಚ್ಚಿನಿಂದ, ಒಂದೇ ಏಟಿಗೆ ಆ ಬಿದಿರನ್ನು ಕಡಿದನು. ಆ ಕ್ಷಣವೇ ಧಾರಾಕಾರವಾಗಿ ರಕ್ತವು ಹರಿದು ಬರಲಾರಂಭಿಸಿತು. ಆಗ ಆ ಮೂವರೂ ಗಾಭರಿಯಿಂದ ನಡುಗಲಾರಂಭಿಸಿ, ರೋಧಿಸತೊಡಗಿದರು. ಆಗ ಅಶರೀರವಾಣಿಯೊಂದು ಹೀಗೆ ನುಡಿಯಿತು. "ಎಲೈ ಮೇದರುಗಳೇ, ನೀವು ಹೆದರಬೇಡಿ, ಕೂಡಲೇ ಹೋಗಿ ನಿಮ್ಮ ದೊರೆಗೆ ನಡೆದ ವಿಚಾರವನ್ನು ತಿಳಿಸಿ. ಆತನು, ಇಲ್ಲಿ "ಗಂಗಾಧರ ಸ್ವಾಮಿ" ಎಂಬ ನಾಮಾಂಕಿತವಿರುವ ಸ್ವಾಮಿಗೆ ದೇವಾಲಯವನ್ನು ಕಟ್ಟಿಸಿ, ನಿತ್ಯ ಪೂಜಾದಿಗಳಿಂದ ವಂದಿಸು" ಎಂದು ಅವರು ರಾಜನನ್ನು ಭೇಟಿಯಾಗುವುದರೊಳಗೆ ಮಗುವಿನ ಕಣ್ಣು ತೆರೆಯುವುದೆಂದು ಆ ವಾಣಿ ತಿಳಿಸುವುದು. ಆದರೆ ಎಚ್ಚರಿಕೆ ಮಾತೊಂದನ್ನು ಹೇಳಿತು. "ಈ ಸಂದರ್ಭದಲ್ಲಿ ನಡೆದ ವಿಚಾರವನ್ನು ರಾಜನಿಗಲ್ಲದೆ ಮತ್ಯಾರಿಗೂ ತಿಳಿಸಬಾರದು ಮತ್ತು ಹೋಗುವಾಗ ಹಿಂದಿರುಗಿಯೂ ನೋಡಬಾರದು, "ಇದಕ್ಕೆ ತಪ್ಪಿದರೆ ತಲೆ ಸಿಡಿದು ಸಾಯುವಿರಿ" ಎಂದು.

ನಾಮಕರಣ

ಇದನ್ನು ಕೇಳಿ ಮೇದರುಗಳು ಭಯ-ಭಕ್ತಿಯಿಂದ ದಿಕ್ಕೆಟ್ಟು ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ಹೊರಟರು. ಅವರ ಪೈಕಿ ಒಬ್ಬನು ಬೆಟ್ಟದ ಪೂರ್ವದಿಕ್ಕಿನಲ್ಲಿ ಹಿಂದಿರುಗಿ ನೋಡಿದ. ತಕ್ಷಣ ಅಲ್ಲೇ ಮೃತನಾದನು. ದಕ್ಷಿಣ ದಿಕ್ಕಿನ ಕಡೆ ಹೊರಟವನೂ ಸಹ ಇದೇ ರೀತಿ ಹಿಂದಿರುಗಿ ನೋಡಿದಾಗ ಸತ್ತನು. ಪಶ್ಚಿಮಾಭಿಮುಖವಾಗಿ ಹೊರಟವನು ಮಾತ್ರ

ಅರುಣಿ ಗ್ರಾಮಕ್ಕೆ ಬಂದು ರಾಜನಿಗೆ ನಡೆದ ಸಂಗತಿಯನ್ನು ತಿಳಿಸಿದನು. ಅಷ್ಟರಲ್ಲಿ ಮಗುವಿಗೆ ಕಣ್ಣು ಬಂದಿದೆ. ರಾಜ ದಂಪತಿಗಳಿಗಂತು ಬಹು ಆನಂದವುಂಟಾಗಿದೆ. ಅಶರೀರ ವಾಣಿಯ ಆದೇಶದಂತೆ ಗಂಗಾಧರ ಸ್ವಾಮಿಯ ದೇವಸ್ಥಾನ ವನ್ನು ಬಹು ಸಂಭ್ರಮದಿಂದ ಕಟ್ಟಿಸಿ ಪೂಜ್ಯಾಧಿಗಳಿಂದ ನಮಸ್ಕರಿಸುತ್ತಾನೆ. ಅಸಂಖ್ಯ ಜನಗಳಿಗೆ ಅನ್ನಸಂತರ್ಪಣೆ ನೀಡಿ, ವಸ್ತ್ರ ಧಾನಾದಿಗಳಿಂದ ಸಂತೃಪ್ತಿಗೊಳಿಸುತ್ತಾನೆ. ತನ್ನ ಅಕ್ಕರೆ ಮಗುವಿಗೆ "ಭೈರವ"ನೆಂದು ನಾಮಕರಣ ಮಾಡಿ ದನು.

ಮಗು ದಿನೇ ದಿನೇ ಬಾಲಚಂದ್ರನಂತೆ ವೃದ್ಧಿಯಾಗಿ, ರಾಜನ ಆದೇಶದಂತೆ ಮಗು 9ನೇ ವಯಸ್ಸಿನಲ್ಲಿ ಚುಂಚನ ಹಳ್ಳಿಯಲ್ಲಿರುವ ಗುರುಪೀಠದಲ್ಲಿ ವಿದ್ಯಾಭ್ಯಾಸಕ್ಕೆ ತೊಡಗಿ, ಸಕಲ ವಿಧ್ಯಾಪಾರಂಗತನಾಗಿ, ದೈವಭಕ್ತಿ ಪರವಶನಾಗಿ ಬೆಳೆದ.

ಒಂದುದಿನ ರಾಜನು ತನ್ನ ಮುದ್ದು ಕುವರನನ್ನು ಕರೆ ತರಲು ಬಂದಾಗ ಭೈರವನು ಹೊರಡಲು ನಿರಾಕರಿಸಿದ. ತನ್ನ ತಂದೆತಾಯಿಯರಿಬ್ಬರ ಪಾದಕ್ಕೆರಗಿ ತಾನು ತಪೋದ್ಗಿರಿಗೆ ತೆರಳಿ ಅಲ್ಲಿ ದೈವ ಚಿಂತನೆ ಮಾಡಲು ಅವರಿಬ್ಬರ ಆಶೀರ್ವಾದ ವನ್ನು ಬೇಡಿದ. ದಂಪತಿಗಳಿಬ್ಬರು ಇದು ದೇವ ಪ್ರೇರಣೆ ಎಂದು ತಿಳಿದು ಆಶೀರ್ವದಿಸಿದರು.

ಉರಿಗದ್ದಿಗೆ

ಭೈರವನು ಗಂಗಾಧರೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ಪೂಜಾಮಗ್ನನಾಗಿ, ಬಿಕ್ಷಾಟನೆಯಿಂದ ಬಾಳುತ್ತಾ, ಇತರರಿಗೂ ಸಹಕರಿಸುತ್ತಾ, ವೈರಾಗ್ಯದಿಂದ ಜ್ಞಾನಿ ಎನಿಸಿಕೊಂಡು ಪೂರ್ಣಚಂದ್ರನಂತೆ ಬೆಳಗುತ್ತಿದ್ದನು. ಇವನ ಮಹಿಮಾ ಪಾಂಡಿತ್ಯಕ್ಕೆಕ್ಕೆ ಜನ ಆಕರ್ಷಿತರಾದರು. ಶಿಷ್ಯಕೋಟಿಯ ಗುಂಪು ಬೆಳೆಯಿತು.

ಕಾಲಕ್ರಮೇಣ ಕಾಲನ ಆದೇಶ ತನ್ನ ಅಂತರಂಗಕ್ಕೆ ಬಂದಾಗ ಭೈರವನು ಗಂಗಾಧರೇಶ್ವರನ ಚರಣಕಮಲಕ್ಕೆ ಎರಗಿ ತನ್ನ ಶಿಷ್ಯರನ್ನು ಕರೆದು ತಾನು ಸಜೀವ ಸಮಾಧಿಗೆ ಸಿದ್ದ ನೆಂದಾಗ ಶಿಷ್ಯಕೋಟಿ ಅವನ ಆಸೆಯನ್ನು ಪೂರೈಸಿದರು. ಆ ಸಮಾಧಿಯೇ ಉರಿಗದ್ದಿಗೆಯಾಯಿತು.

★

ನೆಲಮಂಗಲ ತಾಲ್ಲೂಕ್ ವ್ಯವಸಾಯೋತ್ಪನ್ನಗಳ ಸಹಕಾರ ಮಾರಾಟ ಸಂಘ (ನಿ.)

ನೆಲಮಂಗಲ, (ಬೆಂಗಳೂರು ಜಿಲ್ಲೆ)

ಈ ಸಂಘದಲ್ಲಿ ರೈತರಿಗೆ ಮತ್ತು ಸಾರ್ವಜನಿಕರಿಗೆ ಬೇಕಾಗುವ ಉತ್ತಮ ದರ್ಜೆಯ ಬಿತ್ತನೆ ಬೀಜಗಳು, ರಸಾಯನಿಕ ಗೊಬ್ಬರಗಳು, ಕ್ರಿಮಿನಾಶಕ ಔಷಧಿಗಳು, ವ್ಯವಸಾಯ ಉಪಕರಣಗಳು, ಸ್ಪ್ರೇಯರ್‌ಗಳು, ಜಿಂಕ್‌ಷೀಟ್‌ಗಳು ಹಾಗೂ ಕಡಿಮೆದರದಲ್ಲಿ ನಿಯಂತ್ರಿತ ಮತ್ತು ಅನಿಯಂತ್ರಿತ ಬಟ್ಟೆಗಳು, ಲೇಖಕ್ ಸಾಮಾಗ್ರಿಗಳು ಮತ್ತು ಲೇಖಕ್ ಪುಸ್ತಕಗಳನ್ನು ನಿಗದಿಯಾದ ಬೆಲೆಗೆ ಮಾರಾಟ ಮಾಡಲು ವ್ಯವಸ್ಥೆ ಮಾಡಲಾಗಿದೆ.

ಗ್ರಾಹಕರು ನಮ್ಮಲ್ಲಿ ವ್ಯವಹರಿಸಿ ಸಂಘದ ಏಳಿಗೆಗೆ ಸಹಕರಿಸಬೇಕಾಗಿ ಕೋರಿದೆ.

ಕೆ. ಸೋಮಣ್ಣ, ಎಂ.ಎ.ಬಿ.ಎಲ್.
ಕಾರ್ಯದರ್ಶಿ.

ಡಿ. ಆರ್. ರಾಮಕೃಷ್ಣಪ್ಪ
ಅಧ್ಯಕ್ಷರು

Made out of the Finest Materials

MANGALORE GANESH BEEDIES

Smokers cannot afford to miss them

DAILY SALES EXCEED 8 CRORE BEEDIES

HEAD OFFICE :

MANGALORE GANESH BEEDI WORKS

VINOBA ROAD : : MYSORE-570 005

Telephone : 20241 Telegrams : 'AROMA'

ಿವಗಂಗೆ (ಕಕುದ್ಗಿರಿ)

— ಬಿ. ಎಲ್. ಗೌರಮ್ಮ, ಬಿ.ಎ.

ಬೆಂಗಳೂರು ಜಿಲ್ಲೆಯಲ್ಲಿ "ಶಿವಗಂಗೆ" ಪುಣ್ಯ ೀತ್ರ ಸಮುದ್ರಮಟ್ಟಕ್ಕೆ ಸುಮಾರು 4560 ಅಡಿ ಎತ್ತರ ದ್ದು, ಪೂರ್ವಕ್ಕೆ ಬಸವಾಕಾರವಾಗಿಯೂ, ಪಶ್ಚಿಮಕ್ಕೆ ಣೇಶಾಕಾರವಾಗಿಯೂ, ಉತ್ತರಕ್ಕೆ ಲಿಂಗಾಕಾರ ಾಗಿಯೂ ಮತ್ತು ದಕ್ಷಿಣಕ್ಕೆ ಸರ್ಪಾಕಾರವಾಗಿಯೂ ಣುತ್ತದೆ. ಈ ಕ್ಷೇತ್ರವು ಪುರಾತನ ಕಾಲದಿಂದಲೂ ಕಕುದ್ಗಿರಿ' ಎಂದು ಪ್ರಸಿದ್ಧಿ ಪಡೆದಿತ್ತು. ಇದನ್ನು ಾಶಿ ಎಂದೂ ಹೇಳುತ್ತಾರೆ. ಈ ಬೆಟ್ಟದಲ್ಲಿ ಅಸಂಖ್ಯಾತ ವಲಿಂಗಗಳಿವೆ. ಬೆಟ್ಟದ ಬುಡದಲ್ಲಿ ಅಗಸ್ತ್ಯ ತೀರ್ಥ ದೆ. ಕಾರಣಾಂತರದಿಂದ ದಕ್ಷಿಣಕ್ಕೆ ಬಂದ ಅಗಸ್ತ್ಯ ುಹರ್ಷಿಗಳು, ಇಲ್ಲಿನ ಪ್ರಶಾಂತ ವಾತಾವರಣವನ್ನು ುಚ್ಚಿ ಕೆಲವು ಕಾಲ ತಪಸ್ಸನ್ನಾಚರಿಸಿದರೆಂದು ಹೇಳು ತ್ತಾರೆ. ಇಲ್ಲಿ 108 ಶಿವಲಿಂಗಗಳಿವೆ. ಕಣ್ವ ಮಹರ್ಷಿ ಳೂ ಸಹ ಬೆಟ್ಟದ ತುದಿಯಲ್ಲಿ ನೆಲಸಿ ತಪಸ್ಸನ್ನಾಚರಿಸಿ ದರೆಂದು ಹೇಳುತ್ತಾರೆ. ಆದ್ದರಿಂದ ಅಲ್ಲಿರುವ ಕೊಳ ವೊಂದಕ್ಕೆ ಕಣ್ವತೀರ್ಥವೆಂದು ಹೆಸರಿಟ್ಟಿದ್ದಾರೆ.

ಇದೇ ರೀತಿ ಮುದ್ಗಲ್ ಮುನಿಯು ಬೆಟ್ಟದ ಂದೆ ಹೋಗಿ ತಪಸ್ಸಿಗೆ ಕುಳಿತನು. ಅಲ್ಲಿಯ ಕೊಳಕ್ಕೆ ಮುದ್ಗಲ್ ತೀರ್ಥವೆಂದು ಶಿವಲಿಂಗಕ್ಕೆ ಮುದ್ದು ವೀರೇ ಶ್ವರನೆಂದು ಹೆಸರಾಯಿತು.

ಲೋಕ ಕಲ್ಯಾಣಕ್ಕಾಗಿ, ಪಾವನೆಯರಾಗಿ ಹುಟ್ಟಿ ಬಂದ ಗಂಗಾ, ಸಿಂಧೂ, ನರ್ಮದಾ, ಕಾವೇರಿ ಮತ್ತು ಕೃಷ್ಣೆಯರೂ ಸಹ ಹರಿದು ಗುಪ್ತ ಗಾಮಿನಿಯರಾಗಿ, ಪಂಚ ನದಿಗಳಾಗಿ ಹರಿಯುತ್ತಾರೆ. ಈ ನದಿಗಳು ಹುಟ್ಟುವ ಜಾಗದಲ್ಲಿ ಐದು ಕೋನಗಳಿವೆ, ಅವು ಸಹ ಶಿಲ್ಪಕಲೆಯಿಂದ ನಿರ್ಮಿತವಾಗಿ ಸುಂದರವಾಗಿವೆ.

ಅಗಸ್ತ್ಯ ತೀರ್ಥದ ಪಕ್ಕದಲ್ಲಿಯೇ ಕಮಲ ತೀರ್ಥ ವಿದೆ. ಇಲ್ಲಿ ಪಾರ್ವತಿಯು ತಪಸ್ಸನ್ನಾಚರಿಸಿ ಶಿವನನ್ನು ಒಲಿಸಿಕೊಂಡಳಂತೆ. ಇದಕ್ಕೆ ಈಗ ಗಿರಿಜಾ ಕಲ್ಯಾಣಿ ಎಂದು ಕರೆಯುತ್ತಾರೆ.

ಈ ಬೆಟ್ಟದಲ್ಲಿ 18 ತೀರ್ಥಗಳಿದ್ದು ಅವುಗಳಲ್ಲಿ ಪಾತಾಳ ಗಂಗೆಯು ಮುಖ್ಯವಾದದ್ದು ಎಂದು ಹೇಳು ತ್ತಾರೆ.

ಮೇಲಕ್ಕೆ ಹತ್ತುವ ಇಕ್ಕೆಲಗಳಲ್ಲಿ ಮೂವರು ಶಿವಕುಮಾರರು ನೆಲೆಸಿದ್ದಾರೆ. ಇವರ ಮೂರ್ತಿಗಳು ವಿಚಿತ್ರವಾದ ಶಿಲ್ಪಕಲಾ ನೈಪುಣ್ಯವನ್ನು ಸಾರಿ ಹೇಳು ತ್ತವೆ.

ಇನ್ನೊಂದು ಮಹಾದ್ವಾರವನ್ನು ದಾಟಿದರೆ ಎದು ರಿಗೆ ಕಾಣುವುದೇ ಗಂಗಾಧರಸ್ವಾಮಿ ದೇವಸ್ಥಾನ ಮತ್ತು ಹೊನ್ನಾದೇವಿ ದೇವಸ್ಥಾನ. ಇವು ಸ್ವಾಭಾವಿಕವಾದ ಗುಹಾಂತರ ದೇವಾಲಯಗಳಾಗಿವೆ. ಗಂಗಾಧರ ಸ್ವಾಮಿ ದೇವಸ್ಥಾನದಲ್ಲಿ ಗಿರಿಜಾ ಕಲ್ಯಾಣ ಮಂಟಪ, ನಂದಿಯ ಮಂಟಪಗಳಿವೆ.

ನಂದಿಯ ಮಂಟಪವು, ಬಳಪದ ಕಲ್ಲಿನಿಂದ ಅಖಂಡ ರೀತಿಯಲ್ಲಿ ಕಡೆದಿದ್ದು, ಶಿಲ್ಪಕಲಾ ಕೌಶಲ್ಯ ವನ್ನು ಎತ್ತಿ ತೋರುತ್ತದೆ.

ಶ್ರೀ ಗಂಗಾಧರಸ್ವಾಮಿ ಸ್ವಯಂ ಉದ್ಭವ ಮೂರ್ತಿ. ಈ ದೇವಸ್ಥಾನದ ಮುಂಭಾಗದ ಪ್ರಾಕಾರ ವನ್ನು ಶ್ರೀ ಕೆಂಪೇಗೌಡನು ನಿರ್ಮಿಸಿ, ಜೊತೆಗೆ ಪರಿವಾರ ದೇವತೆಗಳನ್ನು ನಿರ್ಮಿಸಿ, ಪ್ರಾಕಾರದ ಒಳಭಾಗದಲ್ಲಿ ನಂದಿ ಮಂಟಪವನ್ನು ನಿರ್ಮಿಸಲು ಇದಕ್ಕೆ ಉಪಯುಕ್ತ ವಾದ 4 ಕಂಬಗಳನ್ನು ಮತ್ತು ಯೋಗಶಾಲೆ ಮಂಟಪದ 4 ಕಂಬಗಳನ್ನು ಶಿವಗಂಗೆಗೆ 8 ಮೈಲಿ ದೂರವಿರುವ ಮಣ್ಣೆ ಎಂಬ ಗ್ರಾಮದಲ್ಲಿ ಭೂಗತವಾಗಿದ್ದ 8 ಕಂಬ ಗಳನ್ನು ತಂದು ನಿರ್ಮಿಸಿದ್ದಾರೆ. ಅವರ ಕಾಲದಲ್ಲಿ ನೆಟ್ಟ ಅತ್ತಿಯಮರ, ಬಿಲ್ವವೃಕ್ಷ, ಸಂಪಿಗೆ ಮರಗಳು ಈಗಲೂ ಅವರ ಹೆಸರನ್ನು ಹೇಳುವ ಕುರುಹುಗಳಾಗಿವೆ.

ಇಲ್ಲಿ ಒಂದು ದೊಡ್ಡ ಘಂಟೆ ಇದೆ. ಇದನ್ನು

"ಝೇಂಕಾರ" ಘಂಟೆ ಎಂದೂ, ಮತ್ತೊಂದು ಘಂಟೆಯನ್ನು 'ಓಂಕಾರ' ಘಂಟೆ ಎಂದೂ ಕರೆಯುತ್ತಾರೆ. ಇವೆರಡನ್ನು ಕೆಂಪೇಗೌಡರು ಕೊಟ್ಟರೆಂದು ಹೇಳುತ್ತಾರೆ.

ಇನ್ನೊಂದು ವಿಶೇಷವೆಂದರೆ ಭಕ್ತರು ಸ್ವಾಮಿಗೆ ತುಪ್ಪದಿಂದ ಅಭಿಷೇಕ ಮಾಡಿಸಿದರೆ ಅದು ಬೆಣ್ಣೆಯಾಗುತ್ತದೆ.

ಇಲ್ಲಿ ಕೆಂಪೇಗೌಡ, ಕೆಂಪಸೋಮಣ್ಣ ಮತ್ತು ಊಳಿಗದ ಚಿಕ್ಕಣ್ಣನ ಪ್ರತಿಮೆಗಳಿವೆ. ಈ ಪ್ರತಿಮೆಗಳ ಪಕ್ಕದಲ್ಲಿ ಒಂದು ಸುರಂಗಮಾರ್ಗವಿದೆ. ಇದನ್ನು ಕೆಂಪೇಗೌಡರು ನಿರ್ಮಿಸಿದರೆಂದು ಹೇಳುತ್ತಾರೆ. ಅಲ್ಲೇ ಕೆಂಪೇಗೌಡರ ಖಜಾನೆಯು ಇತ್ತೆಂದು ಹೇಳುತ್ತಾರೆ.

ಹೊನ್ನಾದೇವಿ ವಿಗ್ರಹವು 6 ಅಡಿ ಎತ್ತರವಾಗಿ 8 ಕೈಗಳನ್ನು ಹೊಂದಿದ. ಹೊನ್ನಾದೇವಿ, ದೇವಿ ಅವತಾರವೆಂದು ಇದನ್ನು ಶ್ರೀ ಆದಿಶಂಕರಾಚಾರ್ಯರು ಪ್ರತಿಷ್ಠಾಪಿಸಿದ್ದರೆಂದು ಹೇಳುತ್ತಾರೆ. ದೇವಿಯ ಹಿಂದೆ ಶ್ರೀ ಚಕ್ರವಿದೆ.

ಈ ದೇವಾಲಯದಿಂದ ಮುಂದೆ ಹೋದರೆ ಎಮ್ಮೆ ಬಸವನ ವಿಗ್ರಹವೂ ಗಂಜಿ ವೀರಭದ್ರನ ದೇವಸ್ಥಾನವೂ ಸಿಗುತ್ತದೆ. ಅಲ್ಲಿಯೇ ಕೆಂಪೇಗೌಡರು ನಿರ್ಮಿಸಿದ ಹಜಾರವಿದೆ. ಇನ್ನೂ ಸ್ವಲ್ಪದೂರಹೋದರೆ ಗಾರೆ ಬಸವಣ್ಣ ಸಿಗುತ್ತದೆ. ಇಲ್ಲಿಂದ ಇನ್ನೂ ಮುಂದಕ್ಕೆ ಹೋದರೆ ಅಲ್ಲೊಂದು ಗವಿ ಇದೆ. ಮುಂದೆ ಕಡಿದಾದ ಬಂಡೆಗಳನ್ನು ಹತ್ತಿ ಮೇಲಕ್ಕೆ ಹೋದರೆ ಕೋಡು ಬಸವ ಸಿಗುತ್ತದೆ. ಇದು ಬೆಟ್ಟದ ತುದಿಯಲ್ಲಿದೆ. ಇದರ ಪಶ್ಚಿಮದ ಬಂಡೆಯ ತುದಿಯಲ್ಲಿ ಎರಡು ಕಂಬಗಳಿವೆ. ಒಂದಕ್ಕೆ ತೀರ್ಥ ಕಂಬವೆಂದು ಹೇಳುತ್ತಾರೆ. ಈ ತೀರ್ಥವನ್ನು ಗಂಗಾಧರಸ್ವಾಮಿ ಮತ್ತು ಹೊನ್ನಾದೇವಿಯ ಧಾರೆಯ ಸಮಯದಲ್ಲಿ ಮಕರ ಸಂಕ್ರಮಣದ ದಿನದಂದು ಉದಯಿಸುವ ಗಂಗೋದಕವನ್ನು ತಂದು ಧಾರೆಯರೆಯುತ್ತಾರೆಂದು ಹೇಳುತ್ತಾರೆ. ಈ ಬೆಟ್ಟದ ದೇವಸ್ಥಾನವನ್ನು ಕೆಂಪೇಗೌಡರು ಜೀರ್ಣೋದ್ಧಾರ ಮಾಡಿಸಿದ್ದೆಂದು ಹೇಳುತ್ತಾರೆ.

ಈ ಬೆಟ್ಟದ ದಕ್ಷಿಣಭಾಗದಲ್ಲಿ ವೀರರಾಜ ಕಣಿವೆಯಲ್ಲಿ ಶಿಥಿಲವಾದ ಅರಮನೆ ಇದೆ.

ಮುದ್ದಲೇಶ್ವರ ದೇವಸ್ಥಾನದ ಮುಂಭಾಗದಲ್ಲಿ, ಗಂಗಾಧರೇಶ್ವರ ಸ್ವಾಮಿಯು ಕೆಂಪೇಗೌಡರ ಕನಸಿನಲ್ಲಿ "ದೇವಸ್ಥಾನದ ಜೀರ್ಣೋದ್ಧಾರ ಮಾಡು, ನಿನಗೆ ಅಪಾರ ದ್ರವ್ಯ ಸಿಗುತ್ತದೆ. ಮದ್ದಲೇಶ್ವರನ ಮುಂಭಾಗದಲ್ಲಿ ಕೆಲಸ ಪ್ರಾರಂಭಿಸು" ಎಂದು ನುಡಿದನು. ಪ್ರಾರಂಭದಲ್ಲಿ ಕೆಂಪೇಗೌಡರು ಹಜಾರವನ್ನು ಕಟ್ಟಿಸಿ ಆ ಸ್ಥಳದಲ್ಲಿ ಕುಳಿತು ಬಟವಾಡೆ ಮಾಡುತ್ತಿದ್ದರೆಂದು ಪ್ರತೀತಿ ಇದೆ. ನೌಕರರು ಭಕ್ತಿಪೂರ್ವಕವಾಗಿ, ಶಿಸ್ತಿನಿಂದ ಕೆಲಸ ನಿರ್ವಹಿಸಿದರೆ, ಅವರಿಗೆ ಯಥಾರೀತಿ ಕೆಂಪೇಗೌಡರು ಹಣ ಬಟವಾಡೆ ಮಾಡುತ್ತಿದ್ದರು.

ಕ್ರಿ.ಶ. 12ನೇ ಶತಮಾನದಲ್ಲಿ ಹೊಯ್ಸಳ ವಿಷ್ಣುವರ್ಧನನ ರಾಣಿ ಶಾಂತಲಾದೇವಿ ಇಲ್ಲಿಗೆ ಬಂದು ಮೃತಪಟ್ಟಳು. ಇವಳ ಜ್ಞಾಪಕಾರ್ಥವಾಗಿ ದೇವಸ್ಥಾನದ ಗೋಪುರದ ಎಡಭಾಗದಲ್ಲಿ ಶಾಂತೇಶ್ವರ ದೇವಾಲಯವಿದೆ. ಬೆಟ್ಟದ ತುದಿಯಲ್ಲಿ ನಿಂತು ಸುತ್ತಮುತ್ತ ವೀಕ್ಷಿಸಿದರೆ ಸುಂದರ ಮನೋಹರ ದೃಶ್ಯ ಕಾಣುತ್ತದೆ. ದಕ್ಷಿಣ ದಿಕ್ಕಿನಲ್ಲಿ ಮಾಗಡಿ, ಸಾವನ ದುರ್ಗಗಳು. ನೈರುತ್ಯದಲ್ಲಿ ಭೈರವನ ದುರ್ಗವು, ವಾಯುವ್ಯದಲ್ಲಿ ತುಮಕೂರು, ದೇವರಾಯನ ದುರ್ಗಗಳು, ಆಗ್ನೇಯ ದಿಕ್ಕಿನಲ್ಲಿ ಬೆಂಗಳೂರು ನಗರವು ಕಾಣುತ್ತವೆ.

ದಕ್ಷಿಣದ್ವಾರದ ಬಳಿ ಒರಳು ತೀರ್ಥವಿದೆ. ಮಠದ ಹಿಂಭಾಗದಲ್ಲಿ ಕುಂಬಾವತಿ ತೀರ್ಥವಿದೆ. ಉತ್ತರ ದಿಕ್ಕಿನಲ್ಲಿ ಶ್ರೀ ಶಾರದ ದೇವಸ್ಥಾನವಿದೆ.

ಪಾತಾಳಗಂಗೆಯ ಹಿಂದೆ ಪಶ್ಚಿಮಕ್ಕೆ ಹೋದರೆ ಅಲ್ಲಿ ಶ್ರೀ ಶಂಕರ ತೀರ್ಥವಿದೆ. ಶಂಕರಾಚಾರ್ಯರು ಬಹುಕಾಲ ತಪಸ್ಸಿನಿಂದ ಮೈಮರೆತು ನಂತರ ಎಚ್ಚರವಾಗಲು, ಬಾಯಾರಿಕೆಯಿಂದ ನೀರನ್ನು ಕಾಣದೆ ತಮ್ಮ ಉಗುರಿನಿಂದ ಬಂಡೆಯನ್ನು ಗೀರಿದಾಗ ನೀರು ಸುರಿಯಿತಂತೆ. ಅದಕ್ಕೆ ಶಂಕರತೀರ್ಥವೆಂದು ಹೇಳುತ್ತಾರೆ. ಈಗಲೂ ಸಹ ಈ ಬಂಡೆಯ ಸೀಳಿನಿಂದ ನೀರು ಸುರಿಯುತ್ತಲೇ ಇದೆ. ಇನ್ನೂ ಕ್ಷೇತ್ರದಲ್ಲಿ ಹಲವಾರು ಪವಾಡಗಳು ಇದೆ. ಇವೆಲ್ಲವನ್ನು ಹುಡುಕಿ ಸಂಗ್ರಹಿಸಲು ಕಾಲಾವಕಾಶ ಬೇಕಾಗುತ್ತದೆ.

ನಮಸ್ತೆ

ಅದೇ ವೇಷ. ಅಶೋತ್ತರಗಳು ಬೇರೆ.

ನವೀನ ಬುಡಬುಡಿಕೆಯವನು

— ಹೆಚ್. ಗಂಗಪ್ಪ ಬಿ.ಎಸ್‌ಸಿ, ಎಮ್.ಈಡಿ,
ಡಿಪ್ಲೋಮಾ-ಇನ್-ರಶಿಯನ್
ಮಾವಿನ ಕೊಮ್ಮನ ಹಳ್ಳಿ,
ನೆಲಮಂಗಲ ತಾಲ್ಲೂಕು, ಬೆಂಗಳೂರು ಜಿಲ್ಲೆ.

ಶುಭವಾಗುತಯ್ತೆ ಶುಭವಾಗುತಯ್ತೆ
ಶುಭವಾಗುತಯ್ತೆ ಅಣ್ಣ ।
ವಿಜ್ಞಾನ ಪಕ್ಷಿ ನುಡಿಯಿತಯ್ತೆ ಅಣ್ಣ
ಅದನು ನಿಮಗೆ ನಾನೇಳುವೆನಣ್ಣ ॥ಪ॥

ಎಲ್ಲರು ವಿದ್ಯೆಯ ಕಲಿಯಲೆ ಬೇಕು ।
ಮೂಢ ನಂಬಿಕೆಗಳು ತೊಲಗಲಿ ಬೇಕು ।
ಹೀಗೆಂದು ಪಕ್ಷಿ ನುಡಿಯಿತಯ್ತೆ ಅಣ್ಣ
ಅದನು ನಿಮಗೆ ನಾನೇಳುವೆನಣ್ಣ 1

ಜಾತಿ ಮತಗಳು ತೊಲಗಲೆ ಬೇಕು ।
ಮಾನವ ಜಾತಿ ಒಂದೇ ಸಾಕು ।
ಹೀಗೆಂದು ಪಕ್ಷಿ.......... 2

ಮೋಸ ದಾಸ್ಯಗಳು ತೊಲಗಲೇ ಬೇಕು ।
ಶೋಷಣೆಗಂತ್ಯವ ಹೇಳಲೇ ಬೇಕು ।
ಹೀಗೆಂದು ಪಕ್ಷಿ.......... 3

ಎಲ್ಲವು ಕೆಲವರಿಗೆಂಬುದು ಹೋಗಲೇ ಬೇಕು ।
ಎಲ್ಲವು ಎಲ್ಲರಿಗೆಂಬುದು ಬರಲೇ ಬೇಕು ।
ಹೀಗೆಂದು ಪಕ್ಷಿ.......... 4

ದೇಶಕ್ಕೆಲ್ಲ ಒಂದು ಭಾಷೆಯು ಬೇಕು ।
ಜನರಿಗೆಲ್ಲ ಒಂದು ನೀತಿಯು ಬೇಕು ।
ಹೀಗೆಂದು ಪಕ್ಷಿ.......... 5

